# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## 93ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2025ನೇ ಸಾಲಿನ 4ನೇ ಸಭೆಯ ನಡಾವಳಿಗಳು

ದಿನಾಂಕ : ಮಂಗಳವಾರ, 10–06–2025

ಸಮಯ : ಪೂರ್ವಾಹ್ನ 11 : 00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) **PM-USHA (MERU)**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **93ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2025ನೇ ಸಾಲಿನ 4ನೇ ಸಭೆಯನ್ನು** ದಿನಾಂಕ 10 ಜೂನ 2025 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಡಿ.ಎನ್. ಪಾಟೀಲ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಳಿ | ಸದಸ್ಯರು |
| 5. | ಶ್ರೀ ಆರ್. ಎಂ. ದೇವರಡ್ಡಿ | ಸದಸ್ಯರು |
| 6. | ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 7. | ಶ್ರೀ ಎಸ್. ಎ. ದೇಶಮುಖ್ | ಸದಸ್ಯರು |
| 8. | ಶ್ರೀಮತಿ ಎಸ್. ಬಿ.ಢಂಗ | ಸದಸ್ಯರು |
| 9. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 10. | ಶ್ರೀ. ರಫೀ ಭಂಡಾರಿ | ಸದಸ್ಯರು |
| 11. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 12. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 13. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 14. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 15. | ಶ್ರೀಮತಿ ಎಂ.ಎ. ಸಪ್ನ, ಕೆ.ಎ.ಎ.ಎಸ್.(ಹಣಕಾಸು ಅಧಿಕಾರಿಗಳು) | ವಿಶೇಷ ಆಹ್ವಾನಿತರು |
| 16. | ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್.(ಹಿರಿಯ ಶ್ರೇಣಿ) | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 6. | ಶ್ರೀ ರವೀಂದ್ರನಾಥ ಕದಮ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ 10 ಜೂನ್ 2025 ರಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 93ನೇ ಹಾಗೂ 2025ನೇ ಸಾಲಿನ 4ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 20–05–2025
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 20–05–2025

<u>ಪ್ರಸ್ತಾವನೆ:</u>

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 93ನೇ ಹಾಗೂ 2025 ನೇ ಸಾಲಿನ 4 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 10.06.2025 ರಂದು ಪೂರ್ವಾಹ್ನ 11.00 ಘಂಟೆಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಪ್ರೊ. ಡಿ. ಎನ್. ಪಾಟೀಲ್, ಪ್ರಾಧ್ಯಾಪಕರು, ಇವರು ಡೀನ್ ಗುಂಪಿನಿಂದ ಸಿಂಡಿಕೇಟ್ ಸದಸ್ಯರಾಗಿ ನೇಮಕವಾಗಿದ್ದು, ಸದರಿಯವರನ್ನು ಸಭೆಗೆ ಹೂಗುಚ್ಛ ನೀಡಿ ಬರಮಾಡಿಕೊಳ್ಳಲಾಯಿತು. ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯ, ಬೆಳಗಾವಿಯಿಂದ ಕನಿಷ್ಕ ಎಂಬ ಹುಲಿಯನ್ನು ದತ್ತು ಪಡೆದುಕೊಂಡಿದ್ದು ಸಂಬಂಧಿಸಿದ ಪ್ರಮಾಣ ಪತ್ರವನ್ನು ಕುಲಸಚಿವರು ಮಾನ್ಯ ಕುಲಪತಿಗಳಿಗೆ ಹಸ್ತಾಂತರಿಸಿದರು ಮತ್ತು 13 ನೇ ಘಟಿಕೋತ್ಸವದ ಭಾವಚಿತ್ರವನ್ನು ಎಲ್ಲ ಸದಸ್ಯರುಗಳಿಗೆ ವಿತರಿಸಲಾಯಿತು. ಮುಂದುವರೆದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ RCU Skill Plus ಹಾಗೂ Deshpande Skilling, Hubbali ಇವರ ಸಹಯೋಗದೊಂದಿಗೆ Training for Teachers Programme ನ್ನು ಆಯೋಜಿಸಲಾಗಿತ್ತು. ಸದರಿ Programme ನಲ್ಲಿ ವಿಶ್ವವಿದ್ಯಾಲಯದ ಒಟ್ಟು 7 ವಿದ್ಯಾರ್ಥಿಗಳು ಆಯ್ಕೆಯಾಗಿರುವುದಕ್ಕೆ ಕುಲಪತಿಗಳು ಹರ್ಷ ವ್ಯಕ್ತಪಡಿಸಿದರು ಹಾಗೂ ಸದರಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

**ಸಿಂಡಿಕೇಟ್ ಸದಸ್ಯರುಗಳು ಪ್ರಸ್ತಾಪಿಸಿದ ವಿಷಯಗಳು:–**

**ಡಾ. ಕಾವೇರಿ ಎಚ್.ಎಂ:**

1. ಸಿಂಡಿಕೇಟ್ ಸಭೆಗಳನ್ನು Youtube ನಲ್ಲಿ ನೇರ ಪ್ರಸಾರ ಮಾಡಲು ಸಲ್ಲಿಸಿದ ಮನವಿಗೆ ಪ್ರತಿಕ್ರಿಯಿಸಿದ ಕುಲಸಚಿವರು ವಿಶ್ವವಿದ್ಯಾಲಯದ ಶಾಸನಬದ್ಧ ಸಭೆಗಳಾದ ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳನ್ನು ನೇರ ಪ್ರಸಾರ ಮಾಡಲು ಸರ್ಕಾರದ ಆದೇಶವಿರುತ್ತದೆ. ಆದರೆ, ವಿಶ್ವವಿದ್ಯಾಲಯದ ನಿಯಮಾವಳಿ/ ಪರಿನಿಯಮಗಳಲ್ಲಿ (Regulation/Statute) ಅಳವಡಿಸಿಕೊಂಡಿರುವುದಿಲ್ಲ. ಆದರೆ ರೆಕಾರ್ಡ್ ಮಾಡಿ ಶೇಖರಿಸಲಾಗುತ್ತಿದೆ ಎಂದರು.
2. ವಿಶ್ವವಿದ್ಯಾಲಯದ ಕೆಲವು ಕಛೇರಿ ಪತ್ರಗಳಲ್ಲಿ ಕಾಗುಣಿತ ದೋಷಗಳು ಕಂಡು ಬರುತ್ತಿರುವುದರಿಂದ ಎಲ್ಲ ಬೋಧಕೇತರ ಸಿಬ್ಬಂದಿಗಳಿಗೆ (DEO, SDA, FDA) ಟೈಪಿಂಗ್ ಟೆಸ್ಟ್‌ನ್ನು ಡಿ.ಪಿ.ಎ.ಆರ್. ವಿಭಾಗದಿಂದ ಕ್ರಮ ವಹಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ಸೂಚಿಸಿತು.

**ಶ್ರೀ ಈರಣ್ಣ ಹಪ್ಪಲಿ:**

1. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಲ್ಯಾಪ್‌ಟಾಪ್ ಖರೀದಿ, ಕಳಪೆ ಕಾಮಗಾರಿ, ಬೋಧಕೇತರ ಸಿಬ್ಬಂದಿಗಳ ಪದೋನ್ನತಿ ಹಾಗೂ ವರ್ಗಾವಣೆಗಳಲ್ಲಿ ಹಲವಾರು ಅವ್ಯವಹಾರ ನಡೆದಿರುವುದು ತಮಗೆ ದೂರು ಬಂದಿರುವ ಮಾಹಿತಿಯನ್ನು ನೀಡಿದರು ಹಾಗೂ ಈ ಕುರಿತಾಗಿ ಪರಿಶೀಲಿಸಲು ಸಮಿತಿಯನ್ನು ರಚಿಸಲು ಸಲಹೆ ನೀಡಿದರು.

ಶ್ರೀ ಮಹಾಂತೇಶ ಕಂಬಾರ:

- ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳು ಹಲವಾರು ವರ್ಷದಿಂದ(3 ರಿಂದ 5 ವರ್ಷ) ಒಂದೇ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವದರಿಂದ ಆಡಳಿತ ಹಿತದೃಷ್ಠಿಯಿಂದ ಅಂತಹ ಸಿಬ್ಬಂದಿಗಳ ವರ್ಗಾವಣೆ ಕೈಗೊಳ್ಳಲು ಸಲಹೆ ನೀಡಿದ ಹಿನ್ನೆಲೆಯಲ್ಲಿ ಕುಲಸಚಿವರು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.
- ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸರ್ಕಾರಗಳು ಕಾಲ–ಕಾಲಕ್ಕೆ ಹೊರಡಿಸುವ ಪತ್ರಗಳು, ವರದಿಗಳ ಕುರಿತಾಗಿ ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತರುವುದು ಅವಶ್ಯವಿರುವುದರಿಂದ ಪ್ರತಿ ತಿಂಗಳು ಒಂದು ದಿನಾಂಕದಂದು ಸಿಂಡಿಕೇಟ್ ಸಭೆಯನ್ನು ನಿಗದಿಪಡಿಸಲು ಕೋರಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ಸೂಚಿಸಿ ಪ್ರತಿ ತಿಂಗಳು ಎರಡನೆ ಮಂಗಳವಾರದಂದು ಸಿಂಡಿಕೇಟ್ ಸಭೆಯನ್ನು ನಡೆಸಲು ತೀರ್ಮಾನಿಸಿತು.
- Squad Duty ಗೆ ನಿಯೋಜನೆ ಮತ್ತು ಪ್ರಶ್ನೆ ಪತ್ರಿಕೆ, ಪರೀಕ್ಷೆ ಕೇಂದ್ರಗಳ ಮಂಜೂರಾತಿ/ರದ್ದತಿ, ಬಿ.ಎಡ್ ಕಾಲೇಜುಗಳ ಸಮಸ್ಯೆ ಪರೀಕ್ಷಾ ವಿಭಾಗದಲ್ಲಿ ಹಲವಾರು ಸಮಸ್ಯೆಗಳಿರುವುದರಿಂದ ಪರಿಶೀಲನೆಗಾಗಿ ಸುಧಾರಣಾ ಸಮಿತಿ ರಚಿಸಲು ಸಲಹೆ ನೀಡಿದರು.
- ಪ್ರಶ್ನೆ–ಪತ್ರಿಕೆಗಳ ಭಾಷಾಂತರಿಸಲು ಗೂಗಲ್ ಟ್ರಾಸ್ಕ್ರಿಪಶನ, ಪ್ರೋಫ್ ರೆಡಿಂಗ್ ನೀಡದೇ ಇರುವ ವಿಷಯಕ್ಕೆ ಮಾನ್ಯ ಕುಲಪತಿಗಳು ಸೂಕ್ತ ಕ್ರಮ ಕೈಗೊಳ್ಳಲಾಗುವುದಾಗಿ ತಿಳಿಸಿದರು.

ಶ್ರೀ. ರಫೀ ಭಂಡಾರಿ:

- ಸರ್ಕಾರದ ನಿವೃತ್ತ ಕಾರ್ಯದರ್ಶಿಗಳಾದ ಶ್ರೀ ಕೆ. ವಿಜಯ ಭಾಸ್ಕರ ಇವರು ಸರ್ಕಾರದ ಆಡಳಿತ ಸುಧಾರಣೆ ಕುರಿತಾಗಿ ರಾಜ್ಯದ ಎಲ್ಲ ಇಲಾಖೆಗಳಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ವರದಿ/ನಿಯಮಾವಳಿಗಳನ್ನು ರೂಪಿಸಿದ್ದು ವಿಶ್ವವಿದ್ಯಾಲಯದಲ್ಲಿಯೂ ಕೂಡ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಮನವಿ ಸಲ್ಲಿಸಿದರು. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವುದಾಗಿ ತಿಳಿಸಿದರು.
- ಪರೀಕ್ಷಾ ವಿಭಾಗದಲ್ಲಿ ಪರೀಕ್ಷಾ ಕೇಂದ್ರಗಳ ಮಂಜೂರಾತಿ, ಅತಿಥಿ ಉಪನ್ಯಾಸಕರು, ಜೇಷ್ಠತಾ ಪಟ್ಟಿಯ ಮೇರೆಗೆ Squad Duty ನಿಯೋಜನೆ, ಪ್ರಶ್ನೆ ಪತ್ರಿಕೆ ತಯಾರಿಕೆ, ಪರೀಕ್ಷಾ ಶುಲ್ಕ ಹೆಚ್ಚಳ, ಉತ್ತರ ಪತ್ರಿಕೆ ಮೌಲ್ಯಮಾಪನ, ಸಂಭಾವನೆ ಕುರಿತಾಗಿ ಹಲವಾರು ಸಮಸ್ಯೆಗಳಿದ್ದು ಈ ಕುರಿತಾಗಿ ಸಮಗ್ರವಾಗಿ ಪರಿಶೀಲನೆ ಆಗಬೇಕು ಹಾಗೂ ಈ ಕುರಿತಾಗಿ ಆಗಾಗ ದಿನಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತಿರುವುದು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದಿಂದ ನಿಯೋಜನೆಗೊಂಡಿರುವ ಅಧಿಕಾರಿಗಳಾದ ಕುಲಸಚಿವರು, ಕುಲಸಚಿವರು(ಮೌ) ಹಾಗೂ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯದ ನಿಯಮಾವಳಿಗಳು/ಪರಿನಿಯಮಗಳು, ಸರ್ಕಾರದ ಆದೇಶಗಳು, KPTT Act, ಕೆ.ಸಿ.ಎಸ್.ಆರ್ ನಿಯಮಾವಳಿಗಳನ್ನು ಸಂಪೂರ್ಣವಾಗಿ ಅನುಸರಿಸಿ–ಪಾಲನೆ ಮಾಡಿ ಲೆಕ್ಕಪರಿಶೋಧನೆ ಆಕ್ಷೇಪಣೆಗಳಾಗದಂತೆ ಅತ್ಯಂತ ಜವಾಬ್ದಾರಿಯಿಂದ ಎಲ್ಲ ಕಡತಗಳನ್ನು ನಿರ್ವಹಣೆ ಮಾಡುತ್ತಾರೆ. ವಿಶ್ವವಿದ್ಯಾಲಯದಲ್ಲಿ ಯಾವುದೇ ನಿಯಮಗಳು ಉಲ್ಲಂಘನೆಯಾಗಿರುವುದು, ಅವವ್ಯಹಾರದ ದೂರುಗಳು ಸದಸ್ಯರುಗಳ ಗಮನಕ್ಕೆ ಬಂದಲ್ಲಿ ಕಛೇರಿಗೆ ಭೇಟಿ ನೀಡಿ ಯಾವುದೇ ಕಡತಗಳನ್ನು ಪರಿಶೀಲಿಸಬಹುದು ಅಥವಾ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ತಿಳಿಸಿದರು ಹಾಗೂ ತಾವು ಸಭೆಯ ಗಮನಕ್ಕೆ ತಂದ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದರು.

ಮುಂದುವರೆದು, ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿ ಹಲವಾರು ಸಮಸ್ಯೆಗಳು ಎದುರಾಗುತ್ತಿದ್ದು ಈ ಕುರಿತಾಗಿ ದಿನಪತ್ರಿಕೆಗಳಲ್ಲಿಯೂ ಕೂಡ ಪ್ರಕಟವಾಗುತ್ತಿರುತ್ತವೆ. ಕಾರಣ ಈ ಕೆಳಕಾಣಿಸಿದಂತೆ "ಸುಧಾರಣಾ ಸಮಿತಿ" ರಚಿಸಲು ಸಭೆಯು ತೀರ್ಮಾನಿಸಿತು.

| ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಮಹಾಂತೇಶ ಕಂಬಾರ,<br>ಸಿಂಡಿಕೇಟ್ ಸದಸ್ಯರು, ರಾಚವಿ, ಬೆಳಗಾವಿ | ಅಧ್ಯಕ್ಷರು |
| 2 | ಶ್ರೀ ರಫೀ ಭಂಡಾರಿ,<br>ಸಿಂಡಿಕೇಟ್ ಸದಸ್ಯರು, ರಾಚವಿ, ಬೆಳಗಾವಿ | ಸದಸ್ಯರು |
| 3 | ಶ್ರೀ ಈರಣ್ಣ ಹಪ್ಪಳಿ,<br>ಸಿಂಡಿಕೇಟ್ ಸದಸ್ಯರು, ರಾಚವಿ, ಬೆಳಗಾವಿ | ಸದಸ್ಯರು |
| 4 | ಶ್ರೀ ಜಗದೀಶ ಜೋಡಂಗಿ<br>ಸಿಂಡಿಕೇಟ್ ಸದಸ್ಯರು, ರಾಚವಿ, ಬೆಳಗಾವಿ | ಸದಸ್ಯರು |
| 5 | ಶ್ರೀಮತಿ ಗೌರಮ್ಮ ಪಾಟೀಲ್,<br>ಉಪಕುಲಸಚಿವರು, ಪರೀಕ್ಷಾ ವಿಭಾಗ,<br>ರಾಚವಿ, ಬೆಳಗಾವಿ | ಸದಸ್ಯ ಕಾರ್ಯದರ್ಶಿಗಳು |

ಸದರಿ ಸಮಿತಿಯು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳ ಯುಜಿಸಿ/ನಾನ್-ಯುಜಿಸಿ ಅಧ್ಯಾಪಕರ ಜೇಷ್ಠತಾ ಪಟ್ಟಿ, ಬಿ.ಎಡ್. ಮಹಾವಿದ್ಯಾಲಯಗಳ ಸಂಯೋಜನೆ, ಪರೀಕ್ಷಾ ಕೇಂದ್ರಗಳ ಮಂಜೂರಾತಿ/ರದ್ದಾತಿ, ಪ್ರಶ್ನೆ-ಪತ್ರಿಕೆ ರಚನೆ, ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಅವ್ಯವಹಾರದ ದೂರುಗಳು, ಉತ್ತರ-ಪತ್ರಿಕೆಗಳ ಮೌಲ್ಯಮಾಪಕರ ಏಕರೂಪ ಸಂಭಾವನೆ ಕುರಿತಾಗಿ ಪರಿಶೀಲನೆ ನಡೆಸಿ ಸಮಗ್ರ ವರದಿಯನ್ನು ಸಲ್ಲಿಸುವುದು ಹಾಗೂ ಸದರಿ ಸಮಿತಿಯು ಮಹಾವಿದ್ಯಾಲಯಗಳಿಗೆ ಭೇಟಿ ನೀಡುವ ಸಂದರ್ಭ ಒದಗಿ ಬಂದಲ್ಲಿ ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರು ಭೇಟಿ ನೀಡಿದ ಸಂದರ್ಭದಲ್ಲಿ ಸಮಿತಿಯವರು ಕೇಳುವ ಎಲ್ಲ ದಾಖಲಾತಿಗಳನ್ನು ಒದಗಿಸುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲು ಕುಲಸಚಿವರು(ಮೌಲ್ಯಮಾಪನ) ಇವರಿಗೆ ಸಭೆಯು ತಿಳಿಸಿತು.

ತದನಂತರ ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಲಾಯಿತು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 93ನೇ ಹಾಗೂ 2025 ನೇ ಸಾಲಿನ 4ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 10-06-2025 ರಂದು ಕೈಗೊಂಡ ತೀರ್ಮಾನಗಳು.**

| | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2025/06/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| ತೀರ್ಮಾನ | | **ದಿನಾಂಕ 27.03.2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ ದಿನಾಂಕ: 10.04.2025ರ ವಿಶೇಷ ಸಿಂಡಿಕೇಟ್ ಸಭೆಗಳ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.** |
| 02 | 2025/06/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಹಾಗೂ ಸಂಶೋಧನಾ ಅಧ್ಯಯನ ಮಾಡಲು ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿರುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರೊ. ಬಸವರಾಜ ಪದ್ಮಶಾಲಿ, ಹಿರಿಯ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಮತ್ತು ಪ್ರೊ ಜಿ.ಎಫ್ ನಾಗಣ್ಣವರ, ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರುಗಳಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ಹಾಗೂ ಡಾ. ಪಿ.ಎಂ. ಗುರುಬಸವರಾಜ, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಇವರಿಗೆ ಸಂಶೋಧನಾ ಅಧ್ಯಯನ ಮಾಡಲು ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.** |

| | | |
|---|---|---|
| 03 | 2025/06/03 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ವಿನಾಯಕ ಎಂ. ಬಂಕಾಪೂರ ಇವರಿಗೆ ಸೇವಾ ವಯೋನಿವೃತ್ತಿ ನೋಟಿಸ್ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿರುವ ಕುರಿತು. |
| ತೀರ್ಮಾನ | | **ಪ್ರೊ. ವಿನಾಯಕ ಎಂ. ಬಂಕಾಪೂರ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರಿಗೆ ದಿನಾಂಕ: 11.08.2025 ರಂದು 62 ವರ್ಷ ಪೂರ್ಣಗೊಳ್ಳುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ-95 ರನ್ವಯ ಮತ್ತು ಸರಕಾರದ ಆದೇಶಗಳಾದ ಸಂಖ್ಯೆ: ಇಡಿ 37 ಯು.ಎನ್.ಇ. 2009(ಪಿ), ಬೆಂಗಳೂರು, ದಿನಾಂಕ: 15.10.2009 ಹಾಗೂ ಸಂಖ್ಯೆ ಆಇ 34 ಪಿ.ಇ.ಎನ್. 2018, ಬೆಂಗಳೂರು, ದಿನಾಂಕ: 08.04.2018 ರ ನಿಯಮಾವಳಿಗಳನ್ವಯ ಸೇವಾ ವಯೋನಿವೃತ್ತಿ ನೋಟಿಸ್ ನೀಡಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು ಹಾಗೂ ಮುಂದಿನ ಹಂತದ ವಿವಿಧ ನಿವೃತ್ತಿ ಸೌಲಭ್ಯಗಳನ್ನು ಮಂಜೂರಾತಿ ಕಾರ್ಯ ಕೈಗೊಳ್ಳಲು ಅನುಮೋದಿಸಿತು.** |
| 04 | 2025/06/04 | ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಪಿಎಚ್.ಡಿ. ಪ್ರವೇಶಾತಿಗೆ ಅರ್ಜಿ ಸಲ್ಲಿ ನಿರಾಕ್ಷೇಪಣಾ ಪತ್ರ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕುರಿತು |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕೇತರ ಸಿಬ್ಬಂದಿಗಳು ಪಿಎಚ್.ಡಿ. ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 05 | 2025/06/05 | ವಿಶ್ವವಿದ್ಯಾಲಯದ ವಿಜ್ಞಾನ ಹಾಗೂ ಶಿಕ್ಷಣ ನಿಖಾಯಕ್ಕೆ ಡೀನರನ್ನು ನೇಮಿಸಿ ಆದೇಶಿಸಿದ್ದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು. |
| ತೀರ್ಮಾನ | | **ಪ್ರೊ. ವಿನಾಯಕ ಎಂ. ಬಂಕಾಪೂರ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರನ್ನು ವಿಜ್ಞಾನ ನಿಖಾಯದ ಹಾಗೂ ಡಾ. ಸುಷ್ಮಾ ಆರ್. ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರನ್ನು ಶಿಕ್ಷಣ ನಿಖಾಯದ ಡೀನರನ್ನಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ-2000 ದನ್ವಯ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.** |
| 06 | 2025/06/06 | ಪ್ರೊ. ಎಂ. ಸಿ. ಎರ್ರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರನ್ನು ಹುದ್ದೆ ರಹಿತವಾಗಿ ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಬೆಂಗಳೂರು ಇಲ್ಲಿಯ ಶಿಕ್ಷಣ ವಿಭಾಗದ ಪ್ರಾಧ್ಯಾಪಕರ ಹುದ್ದೆಗೆ ವರ್ಗಾಯಿಸಿ ಆದೇಶಿಸಿರುವ ಬಗ್ಗೆ |
| ತೀರ್ಮಾನ | | **ಕರ್ನಾಟಕ ರಾಜ್ಯ ಆದೇಶ ಸಂಖ್ಯೆ: ಇಡಿ 54 ಯುಬಿವಿ 2023, ಬೆಂಗಳೂರು ದಿನಾಂಕ: 07.04.2025 ರನ್ವಯ, ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಮಾನ್ಯ ಕುಲಾಧಿಪತಿಗಳು, ಘನತೆವೆತ್ತ ರಾಜ್ಯಪಾಲರು, ಕರ್ನಾಟಕ ರಾಜ್ಯ ಇವರು ಪ್ರೊ. ಎಂ. ಸಿ. ಎರ್ರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರನ್ನು ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಿರುವುದರಿಂದ ಸದರಿಯವರನ್ನು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ-2000 ರ ಪ್ರಕರಣ 58 ರ ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಿಂದ ಹುದ್ದೆ ರಹಿತವಾಗಿ ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿದ್ದು, ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 07 | 2025/06/07 | **SC/ST Grievance ಸಮಿತಿ ಸಭೆಯ ನಡಾವಳಿಗಳನ್ನು ಸಭೆಯ ಅನುಮೋದನೆಗೆ ಮಂಡಿಸುವ ಕುರಿತು.** |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ SC/ST Grievance ಸಮಿತಿ ಸಭೆಯು ದಿನಾಂಕ: **28.03.2025** ರಂದು ಜರುಗಿಸಿ ಸಲ್ಲಿಸಿದ ವರದಿಯನ್ನು ಡಾ. ಕಾವೇರಿ.ಎಚ್.ಎಂ ಇವರು ಸಭೆಗೆ ಪ್ರಸ್ತುತ ಪಡಿಸಿ ಈ ಕೆಳಕಾಣಿಸಿದ ಅಂಶಗಳನ್ನು ಸಭೆಯ ಗಮನಕ್ಕೆ ತಂದರು. |

| | ಸಂ | ಡಾ. ಕಾವೇರಿ.ಎಚ್.ಎಂ. ಇವರು ಪ್ರಸ್ತಾಪಿಸಿದ ವಿಷಯ | ತೀರ್ಮಾನ |
|---|---|---|---|
| | **01** | ಹಿರೇಬಾಗೇವಾಡಿ-ಹಾಲಗಿಮರ್ಡಿ ಗ್ರಾಮದಲ್ಲಿ ಹೊಸದಾಗಿ | ನೂತನ ಕಟ್ಟಡದಲ್ಲಿ Study Chair ಸಲುವಾಗಿ ಈಗಾಗಲೇ ಪ್ರತ್ಯೇಕವಾದ |

| | | | | |
|---|---|---|---|---|
| | | | ನಿರ್ಮಾಣವಾಗುತ್ತಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡದಲ್ಲಿ ಅಂಬೇಡ್ಕರ ಭವನ, ಪೋಟೋ ಗ್ಯಾಲರಿ ನಿರ್ಮಿಸಲು ವಿಶಾಲವಾದ ಕೊಠಡಿ ಮೀಸಲಿರಿಸುವುದು. | ಕಟ್ಟಡವನ್ನು ಮೀಸಲಿರಿಸಲಾಗಿದ್ದು, ಅಂಬೇಡ್ಕರ ಪೀಠವನ್ನು ಕೂಡ ವಿಶಾಲವಾಗಿ ನಿರ್ಮಿಸಲು ಕುಲಪತಿಗಳು ಒಪ್ಪಿಗೆ ಸೂಚಿಸಿದರು. ಕಟ್ಟಡದ ನಕ್ಷೆಯನ್ನು ಸಭೆಯ ಗಮನಕ್ಕೆ ತರಲಾಗುವುದು ಎಂದರು. |
| | | 02 | ಶ್ರೀಮತಿ ಮೀನಾಕ್ಷಿ ಕಳ್ಳೆ ಮತ್ತು ಶ್ರೀ ವೆಂಕಟೇಶ ಕಬಾಡೆ ಇವರುಗಳು ಸುಮಾರು 21 ವರ್ಷದಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು 10 ವರ್ಷದಿಂದ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾರಣ ಸದರಿ ಸಿಬ್ಬಂದಿಗಳಿಗೆ ಕಛೇರಿ ಅಧೀಕ್ಷಕರಾಗಿ ಪದೋನ್ನತಿ ನೀಡುವುದು. | ವಿಶ್ವವಿದ್ಯಾಲಯದ ಪರಿನಿಯಮಗಳನ್ವಯ ಪದೋನ್ನತಿಗೆ ಮೀಸಲಿರಿಸಿದ 25% ರಲ್ಲಿ ಈಗಾಗಲೇ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲಾಗಿದ್ದು, ಈ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ಹುದ್ದೆಗಳು ಲಭ್ಯವಿರುವುದಿಲ್ಲ ಎಂದು ಕುಲಸಚಿವರು ಸಭೆಗೆ ತಿಳಿಸಿದರು. |
| | | 03 | ಶ್ರೀ ಮಾರುತಿ ಕರಿಯಪರ್, ದ್ವಿತೀಯ ದರ್ಜೆ ಸಹಾಯಕರು ಇವರು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೆನೆನಿ 2020 ಬೆಂಗಳೂರು, ದಿನಾಂಕ: 28.03.2023 ರನ್ವಯ ಪದೋನ್ನತಿ ನೀಡಲು ಕಳೆದ ಮೂರು ವರ್ಷದಿಂದ ಹಲವಾರು ಮನವಿಗಳನ್ನು ಸಲ್ಲಿಸಿದ್ದು ಅದನ್ನು ಪರಿಗಣಿಸಿರುವುದಿಲ್ಲ. ಈ ಕುರಿತಾಗಿ ಸಿಬ್ಬಂದಿಗೆ ಯಾವುದೇ ಹಿಂಬರಹವು ಕೂಡ ನೀಡಿರುವುದಿಲ್ಲ ಮತ್ತು ಸದರಿಯವರ ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯಲಾಗಿದೆ. ಸದರಿಯವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಂಗವೈಕಲ್ಯ ನೌಕರರಾಗಿದ್ದು ಶೀಘ್ರದಲ್ಲಿ ನ್ಯಾಯ ಒದಗಿಸಲು ಕೋರಿದರು. | ಸದರಿ ಸಿಬ್ಬಂದಿಗೆ ತಡೆಹಿಡಿಯಲಾದ ವಾರ್ಷಿಕ ವೇತನ ಬಡ್ತಿಯನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೆನೆನಿ 2020 ಬೆಂಗಳೂರು, ದಿನಾಂಕ: 28.03.2023 ರ ರೋಸ್ಟರ್ ಬಿಂದು ಸಂಖ್ಯೆ 5 ನ್ನು ಅಂಗವೈಕಲ್ಯ ಸಿಬ್ಬಂದಿಗೆ ಮೀಸಲಿಸಿದ್ದನ್ನು ಜೇಷ್ಠತಾ ಪಟ್ಟಿಯನ್ವಯ ಇನ್ನೋರ್ವ ಅಂಗವಿಕಲ ನೌಕರನಿಗೆ ಪದೋನ್ನತಿಯನ್ನು ಈಗಾಗಲೇ ನೀಡಲಾಗಿದೆ. ಸದರಿ ಸಿಬ್ಬಂದಿಯು ಪದೋನ್ನತಿಗೆ ಅರ್ಹನೇ? ಎಂಬುದು ಇನ್ನೂ ಪರಿಶೀಲನೆ ಹಂತದಲ್ಲಿದ್ದು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು. |
| | | 04 | ಕು. ಸ್ನೇಹಾ ಮಾನೆ ಇವರು ಕಳೆದ 10 ವರ್ಷಗಳಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಶೀಘ್ರಲಿಪಿಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: UDD 90 MNU 2014 (P-1) Dated: 16.03.2020 ರನ್ವಯ ಮುಂದಿನ ಹಂತದ ಪದೋನ್ನತಿಗೆ ಅರ್ಹತೆ ಪಡೆಯಲು | ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: UDD 90 MNU 2014 (P-1) Dated: 16.03.2020 ರಲ್ಲಿ ಶೀಘ್ರಲಿಪಿಗಾರರು ಮುಂದಿನ ಹಂತದ ಪದೋನ್ನತಿಗೆ ಅರ್ಹತೆ ಪಡೆಯಲು "The Stenographer must have worked at least one year as First Division Assistant on the basis of Seniority" ಎಂದು ಇರುತ್ತದೆ. |

| | | | | |
|---|---|---|---|---|
| | | | ಐದು ವರ್ಷ ಶೀಘ್ರಲಿಪಿಗಾರರಾಗಿ ಹಾಗೂ ಒಂದು ವರ್ಷದ ಅವಧಿಗೆ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಲು ನಿಯಮವಿರುತ್ತದೆ. ಕಾರಣ, ಸದರಿ ಸಿಬ್ಬಂದಿಗೆ ಒಂದು ವರ್ಷದ ಅವಧಿಗೆ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡುವುದು. | ವಿಶ್ವವಿದ್ಯಾಲಯದಲ್ಲಿ ಓರ್ವ ಶೀಘ್ರಲಿಪಿಗಾರರಾಗಿ ಸದರಿ ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿರುವುದರಿಂದ ಈ ವಿಷಯದ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. |
| | | 05 | ಕಳೆದ ಬಾರಿ ತರಾತುರಿಯಲ್ಲಿ SC/ST Grievance ಸಮಿತಿ ಸಭೆಯನ್ನು ಆಯೋಜಿಸಿದ್ದರಿಂದ ಸಿಬ್ಬಂದಿಗಳ ಗಮನಕ್ಕೆ ಬಾರದೇ ಹೆಚ್ಚಿನ ಸಂಖ್ಯೆ ಗೈರು ಹಾಜರಾತಿ ಇರುವುದು ಕಂಡು ಬಂದಿರುತ್ತದೆ ಎಂಬ ಮಾಹಿತಿಯನ್ನು ಸಭೆಗೆ ನೀಡಿದರು. | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ SC/ST Grievance ಸಮಿತಿ ಸಭೆಯನ್ನು ಮೂರು ತಿಂಗಳಲ್ಲಿ ಒಂದು ಬಾರಿ ಸಭೆಯನ್ನು ಅಯೋಜಿಸಲು ತೀರ್ಮಾನಿಸಲಾಯಿತು ಮತ್ತು ಸಭೆಯನ್ನು ನಿಗದಿಪಡಿಸಿದ ದಿನಾಂಕವನ್ನು ಎಲ್ಲ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಿಬ್ಬಂದಿಗಳಿಗೆ ಮುಂಚಿತವಾಗಿ ತಿಳಿಸಲು ಸಭೆಯು ಸೂಚಿಸಿತು. |
| | | 06 | SC/ST/ಇತರೇ ದೂರು ಮತ್ತು ಸಲಹಾ ಪೆಟ್ಟಿಗೆ ಸ್ಥಾಪಿಸುವುದು | ಸ್ಥಾಪಿಸುವುದಾಗಿ ಕುಲಸಚಿವರು ತಿಳಿಸಿದರು. |
| 08 | 2025/06/08 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಂತರ ವಿಶ್ವವಿದ್ಯಾಲಯದ ವರ್ಗಾವಣೆಗೆ ವಿನಂತಿಸಿರುವ ಕುರಿತು. | | |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಾಣಿಸಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಗಳನ್ನು ಪರಿಶೀಲಿಸಲಾಗಿದ್ದು Genuine Reason ಇರುವುದು ಹಾಗೂ ಸದರಿ ಸಿಬ್ಬಂದಿಗಳ ಕಾರ್ಯಭಾರವನ್ನು ಪರಿಶೀಲಿಸಲಾಗಿದ್ದು ವರ್ಗಾವಣೆಯಿಂದ ವಿಶ್ವವಿದ್ಯಾಲಯದ ಕಛೇರಿ ಕೆಲಸಗಳಿಗೆ ತೊಂದರೆಯಾಗುವುದಿಲ್ಲ ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದ ಹಿನ್ನೆಲೆಯಲ್ಲಿ ಸಭೆಯು ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಅನುಮೋದನೆ ನೀಡಿತು. | | |

| ಸಂ | ಹೆಸರು | ವರ್ಗಾವಣೆಗೆ ಕೋರಿರುವ ವಿಶ್ವವಿದ್ಯಾಲಯ | ಹುದ್ದೆ ರಹಿತ /ಹುದ್ದೆ ಸಹಿತ |
|---|---|---|---|
| 1 | ಡಾ. ರಮೇಶ.ಎಂ.ಎನ್., ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ರಾಚವಿ, ಬೆಳಗಾವಿ | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ | ಹುದ್ದೆ ರಹಿತ |
| 2 | ಡಾ. ಹನುಮಂತಪ್ಪ ಸಂಜೀವಣ್ಣನವರ ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ, ರಾಚವಿ, ಬೆಳಗಾವಿ. | ಹಾವೇರಿ ವಿಶ್ವವಿದ್ಯಾಲಯ, ಹಾವೇರಿ | ಹುದ್ದೆ ರಹಿತ |
| 3 | ಶ್ರೀಮತಿ ವಾಣಿ ಪೋತದಾರ ಗಣಕಯಂತ್ರ ನಿರ್ವಾಹಕರು, ಪರೀಕ್ಷಾ ವಿಭಾಗ, ರಾಚವಿ, ಬೆಳಗಾವಿ. | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | ಹುದ್ದೆ ರಹಿತ |

| | | |
|---|---|---|
| | | ಮುಂದುವರೆದು ಅಂತರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಕೋರಿ ಈ ಹಿಂದೆ ಸಲ್ಲಿಸಿದ ಎಲ್ಲಾ ವರ್ಗಾವಣೆ ಮನವಿಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಭೆಯು ಸೂಚಿಸಿತು. |
| 09 | 2025/06/09 | ಪ್ರೊ. ಶಿವಾನಂದ ಗೊರನಾಳೆ, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಇವರನ್ನು ಗಣಕ ವಿಜ್ಞಾನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿದ್ದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು. |
| ತೀರ್ಮಾನ | | ಪ್ರೊ. ಶಿವಾನಂದ ಗೊರನಾಳೆ, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ–2000 ರ 34(5)(7)(8) ರನ್ವಯ ಗಣಕ ವಿಜ್ಞಾನ ವಿಭಾಗದ ಅಧ್ಯಕ್ಷರನ್ನಾಗಿ ದಿನಾಂಕ: 01.06.2025 ರಿಂದ ಅನ್ವಯವಾಗುವಂತೆ ಆದೇಶಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 10 | 2025/06/10 | ವಿಶ್ವವಿದ್ಯಾಲಯದ ಅಧಿನಿಯಮ 29(22)(ಪಿ) ರನ್ವಯ ವಿಶ್ವವಿದ್ಯಾಲಯದ ಉಪಕುಲಸಚಿವರನ್ನು ಪೂರ್ಣ ಪ್ರಮಾಣದ LCO ಎಂದು ನೇಮಿಸಿ ಎಲ್ಲ ಪ್ರಕರಣಗಳನ್ನು ಸೂಕ್ತವಾಗಿ ನಿಭಾಯಿಸಲು ಅನುಮತಿ ನೀಡುವ ಕುರಿತು |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಕಾನೂನು ವ್ಯವಹರಣೆ ನಡೆಸಲು, ವಿಶ್ವವಿದ್ಯಾಲಯದ ಅಧಿನಿಯಮ 29(22)(ಪಿ) ರನ್ವಯ ವಿಶ್ವವಿದ್ಯಾಲಯದ ಉಪಕುಲಸಚಿವರನ್ನು ಪೂರ್ಣ ಪ್ರಮಾಣದ 'Litigation Conducting Officer' ಎಂದು ನೇಮಿಸಿ ಎಲ್ಲ ಪ್ರಕರಣಗಳನ್ನು ಸೂಕ್ತವಾಗಿ ನಿಭಾಯಿಸಲು ಸಭೆಯು ಅನುಮೋದನೆ ನೀಡಿತು. |
| 11 | 2025/06/11 | ಶ್ರೀ ಗಂಗಾಧರ ಗಡಿಬಿಡಿ, ಪ್ರ.ದ.ಸ. ರಾಚವಿ, ಬೆಳಗಾವಿ ಇವರಿಗೆ ಸಣ್ಣ ಕುಟುಂಬ ಯೋಜನೆಯಡಿ (SFN) ವಿಶೇಷ ವೇತನ ಬಡ್ತಿ ಮಂಜೂರು ಮಾಡುವ ಕುರಿತು. |
| ತೀರ್ಮಾನ | | ಶ್ರೀ ಗಂಗಾಧರ ಗಡಿಬಿಡಿ, ಪ್ರ.ದ.ಸ. ರಾಚವಿ, ಬೆಳಗಾವಿ ಇವರ ಧರ್ಮ ಪತ್ನಿಯವರು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಕೊಂಡಿರುತ್ತಾರೆ. ರಾಜ್ಯ ಸರ್ಕಾರಿ ನೌಕರರಿಗೆ ಉತ್ತೇಜನ ನೀಡುವ ಸಲುವಾಗಿ ಎರಡು ಜೀವಂತ ಮಕ್ಕಳನ್ನು ಹೊಂದಿರುವ ಸರ್ಕಾರಿ ನೌಕರಿಗೆ ಸರ್ಕಾರದ ಆದೇಶ ಸಂ: ಎಫ್‌ಡಿ 27 ಎಸ್‌ಆರ್ ಎಸ್ 85, ಬೆಂಗಳೂರು, ದಿನಾಂಕ: 01.10.1985 ರನ್ವಯ ಸಣ್ಣ ಕುಟುಂಬ ಯೋಜನೆಯಡಿ (SFN) ಒಂದು ವಿಶೇಷ ವೇತನ ಬಡ್ತಿ ಮಂಜೂರು ಮಾಡಲು ಆದೇಶಿಸಿರುತ್ತಾರೆ. ಕಾರಣ, ಶ್ರೀ ಗಂಗಾಧರ ಗಡಿಬಿಡಿ, ಪ್ರ.ದ.ಸ. ರಾಚವಿ, ಬೆಳಗಾವಿ ಇವರಿಗೆ ಸರ್ಕಾರದ ನಿಯಮಾನುಸಾರ ಒಂದು ವಿಶೇಷ ವೇತನ ಬಡ್ತಿ ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಸದರಿ ಸಿಬ್ಬಂದಿಗೆ ಸಿಂಡಿಕೇಟ್ ಸಭೆಯ ಪರವಾಗಿ ಅಭಿನಂದನೆ ಸಲ್ಲಿಸಲು ಸೂಚಿಸಿತು. |
| 12 | 2025/06/12 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 12 ರಿಂದ 13A ಸಹ ಪ್ರಾಧ್ಯಾಪಕರ ಹಂತದ ಪದೋನ್ನತಿಯ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ, ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 12 ರಿಂದ 13A ಸಹ ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ತಜ್ಞರನ್ನು ಒಳಗೊಂಡ **Board of Appointment (BoA)** ಸಮಿತಿಯು ಅಧ್ಯಾಪಕರುಗಳ ಅರ್ಜಿಗಳನ್ನು ಪರಿಶೀಲಿಸಿ ಸಲ್ಲಿಸಿದ ಶಿಫಾರಸ್ಸು ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಈ ಕೆಳಕಾಣಿಸಿದಂತೆ ಪದೋನ್ನತಿಯನ್ನು ನೀಡಲು ತೀರ್ಮಾನಿಸಿತು. |

| Sl No | Name of the Faculty | Dept | Academic Level |
|---|---|---|---|
| 1 | Dr. Sanjay K. Kamble | Marathi | Assistant Professor (Selection Grade/Academic Level 12) to **Associate Professor (Academic Level 13A)** |
| 2 | Dr. Maijoddin M. Mutavali | | |
| 3 | Dr. Manjula G. K. | Sociology | Assistant Professor (Selection Grade/Academic Level 12) to **Associate Professor (Academic Level 13A)** |

| | | |
|---|---|---|
| 13 | 2025/06/13 | ಡಾ. ಹನುಮಂತಪ್ಪ.ಡಿ.ಜಿ., ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಇವರ ಪಿಎಚ್.ಡಿ. ಮಾರ್ಗದರ್ಶಕರ ಕರ್ತವ್ಯ ಮರಳಿ ನೀಡುವ ಬಗ್ಗೆ ರಾಜ್ಯಶಾಸ್ತ್ರ ವಿಭಾಗದ ಡಾಕ್ಟರಲ್ ಸಮಿತಿ ಸಭೆಯ ವರದಿ ಕುರಿತು. |
| ತೀರ್ಮಾನ | | **ಡಾ. ಹನುಮಂತಪ್ಪ.ಡಿ.ಜಿ. ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಇವರಿಗೆ ಪಿಎಚ್.ಡಿ. ಮಾರ್ಗದರ್ಶಕ ಹುದ್ದೆಯಿಂದ 5 ವರ್ಷ ಹೊರಗಿಡಲು ದಿನಾಂಕ: 14.06.2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಸದರಿ ಸಿಬ್ಬಂದಿಯು ನಿರ್ಣಯವನ್ನು ಮರಳಿ ಹಿಂಪಡೆಯಲು ವಿನಂತಿಸಿದ್ದರಿಂದ ದಿನಾಂಕ: 31.12.2024 ರಂದು ಜರುಗಿದ ಸಿಂಡಿಕೇಟ್ ಸಭೆಯು ಡಾಕ್ಟರಲ್ ಸಮಿತಿಯಲ್ಲಿ ಮಂಡಿಸುವಂತೆ ಸೂಚಿಸಿತ್ತು. ಅದರಂತೆ ಡಾಕ್ಟರಲ್ ಸಮಿತಿಯು ದಿನಾಂಕ: 20.02.2025 ರಂದು ಸಭೆ ನಡೆಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.**<br>**ಮುಂದುವರೆದು, ಮಾರ್ಗದರ್ಶಕರಾದ ಡಾ. ಹನುಮಂತಪ್ಪ.ಡಿ.ಜಿ. ಇವರು ಪಿಎಚ್.ಡಿ. ಪದವಿಗಾಗಿ ತಮ್ಮ ಸಂಶೋಧನಾರ್ಥಿಗಳಿಂದ ವಿವಿಧ ಬೇಡಿಕೆಗಳು ಇಡುತ್ತಿರುವ ದೂರು ಬಂದಿರುವುದರಿಂದ ಸದರಿಯವರ ಮಾರ್ಗದರ್ಶಕ ಹುದ್ದೆಯನ್ನು ಹಿಂಪಡೆಯಲಾಗಿತ್ತು. ಪ್ರಸ್ತುತ ಸದರಿ ಸಿಬ್ಬಂದಿಯು ಇ-ವಿದ್ಯಾ ಆ್ಯಪ್‌ನಲ್ಲಿ ಹಲವಾರು ಬೋಧನಾ ವಿಡಿಯೋಗಳನ್ನು ಅಪ್‌ಲೋಡ್ ಮಾಡಿರುವುದು ಹಾಗೂ ಕಛೇರಿಯ ಇತರೇ ಕಾರ್ಯಗಳನ್ನು ಆಸಕ್ತಿಯಿಂದ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದರು ಕುಲಪತಿಗಳು ಸಭೆಗೆ ತಿಳಿಸಿದರು. ಕಾರಣ, ಸಭೆಯು ಡಾ. ಹನುಮಂತಪ್ಪ.ಡಿ.ಜಿ. ಇವರಿಂದ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಲು ಮುಚ್ಚಳಿಕೆ ಪತ್ರ ಪಡೆದು ಮಾರ್ಗದರ್ಶಕ ಹುದ್ದೆ ನೀಡಲು ಸಭೆಯು ಸೂಚಿಸಿತು.** |
| 14 | 2025/06/14 | 2024-25 ನೇ ಶೈಕ್ಷಣಿಕ ಸಾಲಿಗೆ ಮರಾಠಿ ವಿಭಾಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಕನಿಷ್ಠ ಶುಲ್ಕವನ್ನು ಆಕರಣೆ ಮಾಡಿರುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮರಾಠಿ ವಿಭಾಗದ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗುತ್ತಿರುವುದರಿಂದ 2024-25 ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಂದ ಕನಿಷ್ಠ ಶುಲ್ಕ ರೂ. 5005/-ಗಳನ್ನು ನಿಗದಿಪಡಿಸಿ ಪ್ರವೇಶಾತಿ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.**<br>**ಮುಂದುವರೆದು, ಮರಾಠಿ ವಿಷಯಕ್ಕೆ ಪ್ರವೇಶಾತಿ ಕಡಿಮೆಯಾಗುತ್ತಿರುವುದರಿಂದ ವಿಭಾಗಗಳ ಅಧ್ಯಾಪಕರು ಕಾರ್ಯಾಗಾರಗಳನ್ನು ಆಯೋಜಿಸಲು ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ತಮ್ಮ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಹೊಂದಲು ಕಾರ್ಯೋನ್ಮುಖರಾಗಲು ಸಭೆಯು ಸೂಚಿಸಿತು ಹಾಗೂ ವಿಭಾಗದ ಬಲವರ್ಧನೆಗೆ ರೂಪ-ರೇಷೆಗಳನ್ನು ತಯಾರಿಸಲು ಸದಸ್ಯರಾದ ಶ್ರೀ ವಿನೀತ ಜೋಷಿ ಇವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ. ಎಸ್. ಎ. ದೇಶಮುಖ ಇವರ ಸದಸ್ಯತ್ವದಲ್ಲಿ Marathi Department Advisory Committee ರಚಿಸಲು ಸಭೆಯು ತೀರ್ಮಾನಿಸಿತು.** |
| 15 | 2025/06/15 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಯುಜಿ ಕೋರ್ಸಗಳಲ್ಲಿ ಹೋಟೆಲ್ ಮ್ಯಾನೆಜಮೆಂಟ್ ಕೋರ್ಸ ಪ್ರಾರಂಭಿಸುವ ಪ್ರಸ್ತಾವನೆಗೆ ಅನುಸಮರ್ಥನೆ ನೀಡುವ ಕುರಿತು |
| ತೀರ್ಮಾನ | | **ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಸ್ಥಳೀಯ ತನಿಖಾ ಸಮಿತಿಯನ್ನು ನಿಯೋಜಿಸಿ ಸದರಿ ಸಮಿತಿಯ ವರದಿಯನ್ನು ಆಧಾರಿಸಿ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.** |
| 16 | 2025/06/16 | ವಿಜಯಪುರ ಸ್ನಾತಕೋತ್ತರ ಕೇಂದ್ರವನ್ನು ಘಟಕ ಮಹಾವಿದ್ಯಾಲಯವಾಗಿ ಮಾರ್ಪಡಿಸಲು ಹಾಗೂ ಸ್ನಾತಕೋತ್ತರ ಕೇಂದ್ರವನ್ನು ಬೆಳಗಾವಿಯಲ್ಲಿ ಬೇಡಿಕೆ ಇರುವ ಸ್ಥಳವನ್ನು(ಅಥಣಿ) ಗುರುತಿಸುವ ಕುರಿತು |
| ತೀರ್ಮಾನ | | **ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ವಿವಿಧ ವಿಷಯಗಳಿಗೆ ಪ್ರವೇಶಾತಿ ಕಡಿಮೆಯಾಗುತ್ತಿರುವುದರಿಂದ ವಿಭಾಗಗಳನ್ನು ಬಲವರ್ಧನೆಗೊಳಿಸಲು ರೂಪ-ರೇಷೆಗಳನ್ನು ತಯಾರಿಸಲು ಈಗಾಗಲೇ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿ ವರದಿಯನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲು ಹಾಗೂ ಅಲ್ಲಿಯವರೆಗೆ ಯಥಾವತ್ತಾಗಿ ಸ್ನಾತಕೋತ್ತರ ಕೇಂದ್ರವನ್ನು ನಡೆಸಲು ಸಭೆಯು ತೀರ್ಮಾನಿಸಿತು.** |

| | | |
|---|---|---|
| 17 | 2025/06/17 | Alumni ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲು ಅನುಮತಿ ಹಾಗೂ ಸರ್ಕಾರಿ/ಖಾಸಗಿ ವಲಯದಲ್ಲಿ ಅರ್ಹರಿಂದ ಆಸಕ್ತಿಯನ್ನು ವ್ಯಕ್ತಪಡಿಸುವ (Expression of Interest) ಕುರಿತು. |
| | ತೀರ್ಮಾನ | Alumni ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲು ಅನುಮತಿ ಹಾಗೂ ಸರ್ಕಾರಿ/ಖಾಸಗಿ ವಲಯದಲ್ಲಿ ಅರ್ಹರಿಂದ ಆಸಕ್ತಿಯನ್ನು ವ್ಯಕ್ತಪಡಿಸುವವರಿಗೆ (Expression of Interest) ವಹಿಸಿ ಕೊಡಲು ಸಭೆಯ ಅನುಮೋದನೆ ನೀಡಿತು. |
| 18 | 2025/06/18 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದಲ್ಲಿ ಹೊಸದಾಗಿ AI Lab ವನ್ನು ಸ್ಥಾಪಿಸಲು ಅನುಮತಿ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದಲ್ಲಿ ಹೊಸದಾಗಿ AI ಪ್ರಯೋಗಾಲಯವನ್ನು ಸ್ಥಾಪಿಸುವ ವಿಷಯಕ್ಕೆ ಸದರಿ ಪ್ರಯೋಗಾಲಯವನ್ನು ಹಂತ-ಹಂತವಾಗಿ ಸ್ಥಾಪಿಸುವ ಬಗ್ಗೆ ವಿಧಾನಗಳು, ತಗಲುವ ಖರ್ಚು-ವೆಚ್ಚಗಳ ಮಾಹಿತಿ, ಪ್ರಯೋಗಾಲಯದ ಉಪಯೋಗಗಳ ವಿವರವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದು. ತದನಂತರ ಕ್ರಮ ಕೈಗೊಳ್ಳಲು ತೀರ್ಮಾನಿಸಿತು. |
| 19 | 2025/06/19 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸ್ನಾತಕ ಕೋರ್ಸಗಳ ಪ್ರವೇಶ ಮಿತಿಗೆ ಅನುಸಮರ್ಥನೆ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ 2024-25 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಬಿ.ಎ.-320, ಬಿ.ಕಾಂ-320, ಬಿ.ಎಸ್ಸಿ-340, ಬಿಬಿಎ-120, ಬಿಸಿಎ-120 ಕೋರ್ಸಗಳಿಗೆ ಪ್ರವೇಶ ಮಿತಿ ನಿಗದಿಪಡಿಸಲಾಗಿದೆ. ಮುಂದುವರೆದು, ಪ್ರಸ್ತುತ, ಸದರಿ ಮಹಾವಿದ್ಯಾಲಯದ ಪ್ರಾಚಾರ್ಯರು ಬಿ.ಎ.-250, ಬಿ.ಕಾಂ-250, ಬಿ.ಎಸ್ಸಿ-200, ಬಿಬಿಎ-80, ಬಿಸಿಎ-80 ಪ್ರವೇಶ ಮಿತಿಯನ್ನು ಕಡಿಮೆಗೊಳಿಸಿ ನಿಗದಿಪಡಿಸಲು ಮನವಿಯನ್ನು ಸಲ್ಲಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.<br>ಶ್ರೀ. ಮಹಾಂತೇಶ ಕಂಬಾರ:<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಪ್ರವೇಶಾತಿ ಮಿತಿ ಹೆಚ್ಚಿಸಿ ಪ್ರೋತ್ಸಾಹ ನೀಡುವಂತಹ ಕ್ರಮ ವಹಿಸಬೇಕು. ಖಾಸಗಿ ಕಾಲೇಜುಗಳ ಲಾಬಿ ಹೆಚ್ಚಾಗಿರುವ ಕಾರಣ ಸರ್ಕಾರಿ ಸಂಸ್ಥೆಗಳನ್ನು ಬೆಳೆಸಲು ಹೆಚ್ಚಿನ ಆದ್ಯತೆ ನೀಡಬೇಕು. ಒಂದು ವೇಳೆ ಮೂಲಸೌಕರ್ಯಗಳ ಕೊರತೆ ಇದ್ದಲ್ಲಿ Shiftwise ತರಗತಿಗಳನ್ನು ತೆಗೆದುಕೊಳ್ಳವುದು ಸೂಕ್ತ ಎಂದು ತಿಳಿಸಿ ಕಡಿಮೆ ಪ್ರವೇಶಾತಿ ಮಿತಿಗೆ ಆಕ್ಷೇಪಣೆ ವ್ಯಕ್ತಪಡಿಸಿದರು.<br>ಮಾನ್ಯ ಕುಲಪತಿಗಳು:<br>ಮಹಾವಿದ್ಯಾಲಯದಲ್ಲಿ ವಿಜ್ಞಾನ ವಿಷಯದ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಬಿ.ಸಿ.ಎ. ವಿಭಾಗಗಳ ವಿದ್ಯಾರ್ಥಿಗಳಿದ್ದು ಪ್ರಯೋಗಾಲಯಗಳ ಕೊರತೆಯಿರುತ್ತದೆ. Shiftwise ತರಗತಿಗಳನ್ನು ನಡೆಸಲು ಸಿಬ್ಬಂದಿಗಳ ಕೊರತೆಯಿದ್ದು, Shiftwise ತರಗತಿಗಳಿಂದಾಗಿ ವಿದ್ಯಾರ್ಥಿಗಳ ಹಾಜರಾತಿಯಲ್ಲಿ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದರು.<br>ಮುಂದುವರೆದು, ಸದಸ್ಯರುಗಳು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಮೂಲಸೌಕರ್ಯ ಮತ್ತು ಪ್ರಯೋಗಾಲಯಗಳ ಕುರಿತಾಗಿ ಪರಿಶೀಲಿಸಿದ ನಂತರ ಈ ಕುರಿತು ತೀರ್ಮಾನಿಸಲು ನಿರ್ಧರಿಸಲಾಯಿತು. |
| 20 | 2025/06/20 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಸ್ನಾತಕ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಶೇ. 90% ರಷ್ಟು ಅಂಕ ಪಡೆದು ಹಾಗೂ ರೂ. 8.00 ಲಕ್ಷಕ್ಕಿಂತ ಹೆಚ್ಚಿಗೆ ಆದಾಯ ಹೊಂದಿರುವ ಕುರಿತು |

| | | |
|---|---|---|
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ **2025-26** ನೇ ಶೈಕ್ಷಣಿಕ ಸಾಲಿಗೆ ವಿವಿಧ ಕೋರ್ಸಗಳಿಗೆ ಪ್ರವೇಶ ಬಯಸಿ ಬರುವ ವಿದ್ಯಾರ್ಥಿಗಳು ಶೇ. **90** ರಷ್ಟು ಮತ್ತು ಅದರ ಮೇಲ್ಪಟ್ಟು ಅಂಕ ಪಡೆದಿರುವ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಾರ್ಷಿಕ ಆದಾಯ ರೂ. **8** ಲಕ್ಷಗಳ ವರೆಗೆ ಇರುವ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲು ದಿನಾಂಕ: **07.02.2025** ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಈಗ ಸ್ನಾತಕ ವಿವಿಧ ಕೋರ್ಸುಗಳಿಗೆ ಪ್ರವೇಶ ಬಯಸಿ ಬರುವ ವಿದ್ಯಾರ್ಥಿಗಳು **90%** ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ವಾರ್ಷಿಕ ಆದಾಯ ರೂ. **8** ಲಕ್ಷವರೆಗೆ ಇರುವ ವಿದ್ಯಾರ್ಥಿಗಳು ಕಡಿಮೆ ಪ್ರಮಾಣದಲ್ಲಿ ಪ್ರವೇಶ ಬಯಸಿ ಬಂದಿರುತ್ತಾರೆ. ಆದ್ದರಿಂದ, ಶೇ. **90%** ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ರೂ. **8** ಲಕ್ಷಕ್ಕಿಂತ ಹೆಚ್ಚಿಗೆ ವಾರ್ಷಿಕ ಆದಾಯ ಹೊಂದಿರುವ ವಿದ್ಯಾರ್ಥಿಗಳಿಗೂ ಉಚಿತ ಪ್ರವೇಶ ನೀಡಲು ಸಭೆಯು ಅನುಮೋದನೆ ನೀಡಿತು. |
| 21 | 2025/06/21 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಸ್ತುತ ಮತ್ತು ಅಧ್ಯಯನ ಮುಗಿಸಿರುವ ವಿದ್ಯಾರ್ಥಿಗಳಿಗಾಗಿ ರಿಯಾಯತಿ ದರದಲ್ಲಿ(Non Mandatory ಕಡ್ಡಾಯವಲ್ಲದ) ಸ್ಪರ್ಧಾತ್ಮಕ ತರಬೇತಿಯನ್ನು ನೀಡಲು ಅರ್ಹ ಮತ್ತು ನೊಂದಯಿತ ಸಂಸ್ಥೆಗಳಿಂದ RFP(Request for proposal) ನ್ನು ಆಹ್ವಾನಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಸ್ತುತ ಮತ್ತು ಅಧ್ಯಯನ ಮುಗಿಸಿರುವ ವಿದ್ಯಾರ್ಥಿಗಳಿಗಾಗಿ ರಿಯಾಯತಿ ದರದಲ್ಲಿ (Non Mandatory ಕಡ್ಡಾಯವಲ್ಲದ) ಸ್ಪರ್ಧಾತ್ಮಕ ತರಬೇತಿಯನ್ನು ನೀಡಲು ಅರ್ಹ ಮತ್ತು ನೊಂದಾಯಿತ ಸಂಸ್ಥೆಗಳಿಂದ RFP(Request for proposal)ನ್ನು ಆಹ್ವಾನಿಸಲು ಸಭೆಯು ಅನುಮೋದನೆ ನೀಡಿತು. |
| 22 | 2025/06/22 | School of Criminology and Criminal Justice ಅಡಿಯಲ್ಲಿ 2021-22ನೇ ಸಾಲಿನಿಂದ M.Sc Criminology and Forensic Science ನ್ನು ಪ್ರಾರಂಭಿಸಿರುವುದನ್ನು ಸ್ನಾತಕೋತ್ತರ ಕೋರ್ಸಗಳ ನಿಯಮಾವಳಿಗಳಲ್ಲಿ ಸೇರ್ಪಡೆಗೊಳಿಸಿ ಉನ್ನತ ಶಿಕ್ಷಣ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲು ಅನುಮೋದನೆ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಪರಾಧಶಾಸ್ತ್ರ ವಿಭಾಗವು School of Criminology and Criminal Justice ಅಡಿಯಲ್ಲಿ **2021-22** ನೇ ಸಾಲಿನಿಂದ M.Sc Criminology and Forensic Science ನ್ನು ದಿನಾಂಕ: **23.03.2021** ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದುಕೊಂಡು ಪ್ರಾರಂಭಿಸಲಾಗಿದೆ. ಸದರಿ ಮಾಹಿತಿಯನ್ನು **2020-21**ನೇ ಸಾಲಿನ ಸ್ನಾತಕೋತ್ತರ ನಿಯಮಾವಳಿಗಳಲ್ಲಿ ಈ ಕೆಳಗಿನಂತೆ ಸೇರ್ಪಡೆಗೊಳಿಸಿ ಹಾಗೂ ಇನ್ನಿತರೇ ಪರಿಷ್ಕರಣೆಯೊಂದಿಗೆ ಉನ್ನತ ಶಿಕ್ಷಣ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.<br>SL No. PROGRAMES:<br>05 \| School of Criminology and Criminal Justice \| • MA/M.Sc Criminology and Criminal Justice • M.Sc Criminology and Forensic Science<br>02 \| School of Basic Sciences \| • M.Sc in Alcohol Technology • M.Sc in Sugar Technology<br>• Revised CGPA/SGPA details.<br>• Addition of Criminology and Criminal Justice Course structure.<br>• Addition of Separate MBA & M.Com Course Structures<br>• Addition of M.Sc in Alcohol Technology Course Structure.<br>• Addition of M.Sc. Sugar Technology Course Structure. |
| 23 | 2025/06/23 | 2025-26 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿಯ ಪೂರ್ವ ಸಿದ್ಧತೆ ಹಾಗೂ ಪ್ರಕ್ರಿಯೆಗಳಿಗೆ ಸಭೆಯ ಅನುಮೋದನೆ ಕುರಿತು. |
| | | 1. **2024-25**ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಕೋರ್ಸಗಳಿಗೆ ಏಕರೂಪ ಶುಲ್ಕಗಳಿಗೆ ಶೇಕಡಾ **10** ರಷ್ಟು ಹೆಚ್ಚಿಸಿ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು. ಸದರಿ ಶುಲ್ಕಗಳಿಗೆ **2025-26**ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಶೇಕಡಾ **10** ರಷ್ಟು ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು. |

| | | |
|---|---|---|
| | | 2. 2024–25 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅಳವಡಿಸಿಕೊಂಡಿರುವ ಪ್ರವೇಶಾತಿ ಶುಲ್ಕಗಳನ್ನು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಮುಂದುವರೆಸಲು ಸಭೆಯು ಅನುಮೋದನೆ ನೀಡಿತು.<br>3. 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಕೇವಲ ಮರಾಠಿ ವಿಭಾಗಕ್ಕೆ ರೂ. 5005/- ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಲಾಗಿತ್ತು. ಸದರಿ ಶುಲ್ಕಗಳನ್ನು 2025–26ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಲು ಸಭೆಯು ಅನುಮೋದನೆ ನೀಡಿತು.<br>4. 2023–24, 2024–25 ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಫ್ರೀಶೀಪ್ ಕಾರ್ಡ ಮೂಲಕ ಪ್ರವೇಶ ಪಡೆದುಕೊಂಡ ಹಾಗೂ ಮಧ್ಯದಲ್ಲಿ ಅಧ್ಯಯನ ಮೊಟಕಗೊಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಅಂಕಿ-ಅಂಶಗಳ ಪಟ್ಟಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಕನ್ನಡ, ರಾಜ್ಯಶಾಸ್ತ್ರ, ಶಿಕ್ಷಣ ಮತ್ತು ಪತ್ರಿಕೋದ್ಯಮ ವಿಭಾಗಗಳ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದು ಅರ್ಧದಲ್ಲಿ ಮೊಟಕುಗೊಳಿಸಿದ್ದು ಕೇವಲ ಶಿಷ್ಯವೇತನ, ಬಸ್‌ಪಾಸ್ ಲ್ಯಾಪ್‌ಟಾಪ್ ಮತ್ತು ಇತರೇ ಸೌಲಭ್ಯಗಳನ್ನು ಪಡೆಯಲು ಮಾತ್ರ ಪ್ರವೇಶಾತಿ ಪಡೆದಿರುವುದು ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಕನ್ನಡ, ರಾಜ್ಯಶಾಸ್ತ್ರ, ಶಿಕ್ಷಣ ಮತ್ತು ಪತ್ರಿಕೋದ್ಯಮ ವಿಭಾಗಗಳಿಗೆ 2025–26 ನೇ ಶೈಕ್ಷಣಿಕ ಸಾಲಿನಿಂದ ಫ್ರೀಶೀಪ್ ಕಾರ್ಡ ಪ್ರವೇಶಾತಿಯನ್ನು ರದ್ದುಪಡಿಸಲು ಸಭೆಯು ತೀರ್ಮಾನಿಸಿತು. |
| 24 | 2025/06/24 | ಸ್ನಾತಕ ವಾಣಿಜ್ಯ ವಿಭಾಗದ ಪಠ್ಯಕ್ರಮದಲ್ಲಿ ಅರ್ಥಶಾಸ್ತ್ರದ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 14.05.2025 ರ ಸಭೆಯ ನಿರ್ಣಯದ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕ ವಾಣಿಜ್ಯ ವಿಷಯದ ಪಠ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಷಯವನ್ನು ಅಳವಡಿಸುವ ಕುರಿತಾಗಿ ತೀರ್ಮಾನಿಸಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: 14.05.2025 ರಂದು ಸಭೆ ನಡೆಸಿ, ಸದರಿ ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ ಪ್ರೊ. ಎಸ್. ಆರ್. ನಿರಂಜನ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಈ ವಿಷಯವಾಗಿ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು. ಅದರಂತೆ, ಅರ್ಥಶಾಸ್ತ್ರ ವಿಷಯವನ್ನು ವಾಣಿಜ್ಯಶಾಸ್ತ್ರ ವಿಷಯದ ಪಠ್ಯಕ್ರಮದಲ್ಲಿ ಅಳವಡಿಸಲು, ಬೋಧನೆ ಮತ್ತು ಮೌಲ್ಯಮಾಪನ ಕಾರ್ಯವನ್ನು ಅರ್ಥಶಾಸ್ತ್ರ ವಿಷಯದ ಅಧ್ಯಾಪಕರು ಕೈಗೊಳ್ಳಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ನಲ್ಲಿ ತೀರ್ಮಾನವಾಗಿದೆ. ಕಾರಣ, ಅದರಂತೆ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 25 | 2025/06/25 | 2025–26ನೇ ಶೈಕ್ಷಣಿಕ ಸಾಲಿನಿಂದ ಬಿ.ವಿ.ವಿ. ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಡಿಯಲ್ಲಿನ ಪ್ರೊ. ಸಿ. ಎನ್. ರಾವ್, ಸಂಶೋಧನಾ ಕೇಂದ್ರದ ರಸಾಯನಶಾಸ್ತ್ರ ಅಧ್ಯಯನ ವಿಷಯಕ್ಕೆ ಸಂಯೋಜನಾ ಮುಂದುವರಿಕೆಯ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಸಮಿತಿಯು ನೀಡಿರುವ ವರದಿ ಕುರಿತು. |
| ತೀರ್ಮಾನ | | 2025–26ನೇ ಶೈಕ್ಷಣಿಕ ಸಾಲಿನಿಂದ ಬಿ.ವಿ.ವಿ. ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಡಿಯಲ್ಲಿನ ಪ್ರೊ. ಸಿ. ಎನ್. ರಾವ್, ಸಂಶೋಧನಾ ಕೇಂದ್ರದ ರಸಾಯನಶಾಸ್ತ್ರ ಅಧ್ಯಯನ ವಿಷಯಕ್ಕೆ ಸಂಯೋಜನಾ ಮುಂದುವರಿಕೆಯ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಸಮಿತಿಯು ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 26 | 2025/06/26 | 2024–25ನೇ ಶೈಕ್ಷಣಿಕ ಸಾಲಿನಲ್ಲಿ ಮಹಾವಿದ್ಯಾಲಯಗಳ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿರುವ ಮಹಾವಿದ್ಯಾಲಯಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 63 ರ ಉಪಪ್ರಕರಣ 3 ರಡಿಯಲ್ಲಿ ಸ್ಪಷ್ಟೀಕರಣ ಕೋರಿ ತಿಳುವಳಿಕೆ ಕುರಿತು. |
| ತೀರ್ಮಾನ | | 2024–25ನೇ ಶೈಕ್ಷಣಿಕ ಸಾಲಿನಲ್ಲಿ ಮಹಾವಿದ್ಯಾಲಯಗಳ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿರುವ ಮಹಾವಿದ್ಯಾಲಯಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 63 ರ ಉಪಪ್ರಕರಣ 3 ರಡಿಯಲ್ಲಿ ಸ್ಪಷ್ಟೀಕರಣ ಕೋರಿ ತಿಳುವಳಿಕೆ ಪತ್ರ(ನೋಟಿಸ್) ನೀಡಲು ಸರ್ಕಾರವು ನಿರ್ದೇಶಿಸಿರುತ್ತದೆ. ಅದರಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಮಹಾವಿದ್ಯಾಲಯ ಸ್ಥಗಿತಕ್ಕಾಗಿ ಅರ್ಜಿ ಸಲ್ಲಿಸಿರುವವರಿಗೆ ಸ್ಪಷ್ಟೀಕರಣ ಕೋರಿ ತಿಳುವಳಿಕೆ ಪತ್ರ(ನೋಟಿಸ್) ನೀಡಲು ಸಭೆಯು ಸೂಚಿಸಿತು. |

| | | |
|---|---|---|
| 27 | 2025/06/27 | ಕಳೆದ 4 ವರ್ಷಗಳಿಂದ ಸಂಯೋಜನೆಗಾಗಿ ಅರ್ಜಿ ಸಲ್ಲಿಸದೆ ಇರುವ ಮಹಾವಿದ್ಯಾಲಯಗಳ ವಿರುದ್ಧ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 63 ರಡಿಯಲ್ಲಿ ಕ್ರಮ ಕೈಗೊಳ್ಳಲು ಅನುಮೋದನೆ ಕೋರಿರುವ ಕುರಿತು. |
| | ತೀರ್ಮಾನ | ಕಳೆದ 4 ವರ್ಷಗಳಿಂದ ಮುಂದುವರಿಕೆ/ವಿಸ್ತರಣೆಗಾಗಿ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯ ಕೆಲವೊಂದು ಮಹಾವಿದ್ಯಾಲಯಗಳು ಸಂಯೋಜನೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಅಂತಹ ಮಹಾವಿದ್ಯಾಲಯಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 63 ರ ಉಪಪ್ರಕರಣ 3 ರಡಿಯಲ್ಲಿ ಸ್ಪಷ್ಟೀಕರಣ ಕೋರಿ ತಿಳುವಳಿಕೆ ಪತ್ರ(ನೋಟಿಸ್) ನೀಡಲು ಸಭೆಯು ಸೂಚಿಸಿತು. |
| 28 | 2025/06/28 | ಕಳೆದ 3 ವರ್ಷಗಳಿಂದ ಕಡಿಮೆ ಮೌಲ್ಯಾಂಕ ಗಳಿಸಿರುವ ಮಹಾವಿದ್ಯಾಲಯಗಳ ಪಟ್ಟಿಯನ್ನು ಸಿದ್ಧಪಡಿಸಿದ್ದು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಸಲ್ಲಿಸಿರುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕೆಲವು ಮಹಾವಿದ್ಯಾಲಯಗಳು ಕಳೆದ 3 ವರ್ಷಗಳಿಂದ ಕಡಿಮೆ ಮೌಲ್ಯಾಂಕ(40 ರಿಂದ 55ರ ತನಕ) ಗಳಿಸಿದ್ದು ಅದರ ವಿವರವನ್ನು ಸಭೆಗೆ ಮಂಡಿಸಲಾಯಿತು. ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು 50 ಕ್ಕಿಂತ ಕಡಿಮೆ ಅಂಕಗಳನ್ನು ಹೊಂದಿದ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಲು 02 ಸಿಂಡಿಕೇಟ್ ಸದಸ್ಯರು ಹಾಗೂ ಓರ್ವ ವಿದ್ಯಾವಿಷಯಕ್ ಪರಿಷತ್ ಸದಸ್ಯರನ್ನು ಒಳಗೊಂಡ ಉಪ ಸಮಿತಿಗಳನ್ನು ರಚಿಸಲು ತೀರ್ಮಾನಿಸಿತು. |
| 29 | 2025/06/29 | 43 ಎಕರೆ ಅರಣ್ಯ ಜಮೀನನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವ ಕುರಿತು. |
| | ತೀರ್ಮಾನ | ಹಿರೇಬಾಗೇವಾಡಿ–ಹಾಲಗಿಮರ್ಡಿ ಗ್ರಾಮದಲ್ಲಿ ಈಗಾಗಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಪೂರ್ಣಗೊಂಡ ನಂತರ ಹಂತ–ಹಂತವಾಗಿ ಕೆಲವು ವಿಭಾಗಗಳನ್ನು ಸ್ಥಳಾಂತರಿಸಲಾಗುವುದು. ಪ್ರಸ್ತುತ ಭೂತರಾಮನಹಟ್ಟಿಯ ರಾಚವಿ ಯಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳಲ್ಲಿ ವಿದ್ಯಾರ್ಥಿನಿಯವರ ವಸತಿ ನಿಲಯ, School of Langagues ಗಳಿಗೆ ಮೀಸಲಿರಿಸಲು ಯೋಜಿಸಲಾಗಿದ್ದು, ಇಲ್ಲಿರುವ 169.10 ಗುಂಟಾ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ವಾಯತ್ತದಲ್ಲಿ ಪಡೆದುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ, ಅರಣ್ಯ ಮೀಸಲು ಜಮೀನಾಗಿದ್ದರಿಂದ ಪ್ರಸ್ತಾವನೆ ತಿರಸ್ಕಾರಗೊಂಡಿರುತ್ತದೆ.ಈ ಕುರಿತಾಗಿ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ತೆರಳಿ ಕೂಲಂಕುಷವಾಗಿ ಚರ್ಚಿಸಲಾಗಿದ್ದು ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ಜಮೀನಿನ ಪ್ರಸ್ತಾವನೆಯನ್ನು 03 ಶೇಪ್ ಫೈಲಗಳಲ್ಲಿ ತಯಾರಿಸಿ ಸಲ್ಲಿಸಲು ಸೂಚಿಸಿದ್ದರು. ಅದರಂತೆ, 60 ಎಕರೆ, 43 ಎಕರೆ ಮತ್ತು 30 ಎಕರೆ ಹೀಗೆ ಮೂರು ಪ್ರತ್ಯೇಕ ಶೇಪ್ ಫೈಲಗಳನ್ನು ತಯಾರಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಿದಾಗ ಅಧಿಕಾರಿಗಳು ಕೊನೆಯದಾಗಿ 43 ಎಕರೆ ಜಮೀನು ಹೊಂದಿರುವ ಶೇಪ್ ಫೈಲ ಆಯ್ಕೆಯಾಗಿರುವ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದರು ಹಾಗೂ 43 ಎಕರೆ ಜಮೀನಿನಲ್ಲಿರುವ ಕಟ್ಟಡಗಳ ವಿವರವನ್ನು ಸಭೆಗೆ ನೀಡಿದರು. ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಕೋರಿದರು.<br>ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು 43 ಎಕರೆ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ವಾಯತ್ತತೆಗೆ ತೆಗೆದುಕೊಳ್ಳಲು ಮಾಹಿತಿಯನ್ನು ಮೊದಲು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ನಂತರ ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ಸೂಚಿಸಿತು. |
| 30 | 2025/06/30 | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ Functional English Lab ವನ್ನು ಪ್ರಾರಂಭಿಸಲು ಅನುಮತಿ ಹಾಗೂ BCA Lab ನ್ನು ಸಶಕ್ತಗೊಳಿಸುವ ಕುರಿತು. |
| | ತೀರ್ಮಾನ | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ Functional English Lab ವನ್ನು ಪ್ರಾರಂಭಿಸಲು ಅನುಮತಿ ಹಾಗೂ BCA Lab ನ್ನು ಸಶಕ್ತಗೊಳಿಸಲು ಸಭೆಯು ಅನುಮೋದನೆ ನೀಡಿತು. ಮುಂದುವರೆದು, Functional English Lab ಹಾಗೂ BCA Lab ಗಳ ಕುರಿತಾಗಿ ವಿಸ್ತಾರವಾದ Specification ಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಭೆಯು ಸೂಚಿಸಿತು. |

| | | |
|---|---|---|
| 31 | 2025/06/31 | **2025–26ನೇ ಸಾಲಿನ ಖರೀದಿ ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ಕೋರಿ** |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಸಾಮಗ್ರಿಗಳನ್ನು ಖರೀದಿಸಲು ದಿನಾಂಕ: **22.04.2025** ರಂದು **2025–26ನೇ** ಸಾಲಿನ ಮೊದಲ ಖರೀದಿ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಮಿತಿಯು ಸಲ್ಲಿಸಿದ ನಡಾವಳಿಯನ್ನು ಪರಿಶೀಲಿಸಿ ಖರೀದಿಸಲು ಸಭೆಯು ಅನುಮೋದನೆ ನೀಡಿತು. |
| 32 | 2025/06/32 | ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡುತ್ತಿರುವ ಎಲ್ಲ ಬೋಧಕ ಸಿಬ್ಬಂದಿಗಳಿಗೆ 2012 ರಲ್ಲಿ ನೀಡಲಾದ ಹಳೆಯ ಲ್ಯಾಪ್‌ಟಾಪ್‌ಗಳನ್ನು ಹಿಂಪಡೆದು ಪಿ.ಎಂ. ಉಷಾ ಯೋಜನೆಯಡಿಯಲ್ಲಿ ಹೊಸ ಲ್ಯಾಪ್‌ಟಾಪ್‌ಗಳನ್ನು ವಿತರಿಸುವ ಕುರಿತು. |
| | ತೀರ್ಮಾನ | ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡುತ್ತಿರುವ ಎಲ್ಲ ಬೋಧಕ ಸಿಬ್ಬಂದಿಗಳಿಗೆ **2012** ರಲ್ಲಿ ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿದೆ. ಪ್ರಸ್ತುತ **12** ವರ್ಷಗಳು ಕಳೆದಿದ್ದು, ಇದೀಗ ಪಿ.ಎಂ. ಉಷಾ ಯೋಜನೆಯಡಿಯಲ್ಲಿ ಹೊಸ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಅವಕಾಶವಿದೆ. ಕಾರಣ, ಬೋಧಕ ಸಿಬ್ಬಂದಿಗಳ ಶೈಕ್ಷಣಿಕ ಅಭಿವೃದ್ಧಿಗೆ ಹೊಸ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಸಭೆಯು ಅನುಮೋದನೆ ನೀಡಿತು. ಕೆಲವು ಬೋಧಕ ಸಿಬ್ಬಂದಿಗಳು ನಿವೃತ್ತಿ ಅಂಚಿನಲ್ಲಿರುವುದರಿಂದ **3** ವರ್ಷ ಸೇವಾವಧಿ ಬಾಕಿ ಇರುವ ಬೋಧಕ ಸಿಬ್ಬಂದಿಗಳನ್ನು ಹೊರತುಪಡಿಸಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಸೂಚಿಸಿತು.<br>ಮುಂದುವರೆದು, **2012** ರಲ್ಲಿ ಈಗಾಗಲೇ ವಿತರಿಸಲಾದ ಲ್ಯಾಪ್‌ಟಾಪ್‌ಗಳನ್ನು ಮರಳಿ ಪಡೆಯಲು, ಒಂದು ವೇಳೆ ಸಿಬ್ಬಂದಿಗಳು ಲ್ಯಾಪ್‌ಟಾಪ್‌ಗಳನ್ನು ಸ್ವಂತಕ್ಕೆ ಪಡೆಯಲು ಇಚ್ಛಿಸಿದಲ್ಲಿ ರೂ. **5000/–**ಗಳ ಮೊತ್ತವನ್ನು ಭರಿಸಿಕೊಳ್ಳಲು ಸಭೆಯು ತೀರ್ಮಾನಿಸಿತು. |
| 33 | 2025/06/33 | ಗೀತೆ ರಚನೆ ಉಪಸಮಿತಿ ಸಭೆಯ ವರದಿಯನ್ನು ಸಭೆಗೆ ಮಂಡಿಸುವ ಕುರಿತು |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಉನ್ನತಿ, ಹಿಂದಿನ ಘಟನಾವಳಿ ಹಾಗೂ ಹಿಂದಿನ ಭವಿಷ್ಯ ಕುರಿತು ಗೀತ ರೂಪದಲ್ಲಿ ಪ್ರಾರ್ಥನಾ ಗೀತೆಯನ್ನು ರಚಿಸಲು ಉಪ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಉಪ ಸಮಿತಿಯು ನಮ್ಮ ನಾಡಿನ ಹೆಸರಾಂತ ಸಂಗೀತಗಾರರಾದ ಹಂಸಲೇಖರವರು ಸಂಗೀತ ಸಂಯೋಜನೆ ಮಾಡಿರುವ ಸಂವಿಧಾನ ಪೀಠಿಕೆಯ ಪ್ರಾರ್ಥನಾ ಗೀತೆಯನ್ನು ಸಭೆಗೆ ಪ್ರಸ್ತುತಪಡಿಸಿದರು.<br>ಸದಸ್ಯರುಗಳಾದ ಶ್ರೀ ಮಹಾಂತೇಶ ಕಂಬಾರ ಹಾಗೂ ಡಾ. ಕಾವೇರಿ. ಎಚ್.ಎಂ. ಇವರುಗಳು ಈಗಾಗಲೇ ರಾಷ್ಟ್ರಗೀತೆ ಮತ್ತು ನಾಡಗೀತೆಯನ್ನು ಹಾಡುವುದು ವಿಶ್ವವಿದ್ಯಾಲಯದಲ್ಲಿ ರೂಢಿಯಾಗಿರುವುದರಿಂದ ಪ್ರತ್ಯೇಕವಾದ ಪ್ರಾರ್ಥನಾ ಗೀತೆಯ ಅವಶ್ಯಕತೆ ಇರುವುದಿಲ್ಲ. ಭಾರತದ ಸಂವಿಧಾನದ ಪೀಠಿಕೆಯು ಸಮಾನತೆ, ಸಹೋದರತೆ, ಐಕ್ಯತೆಯೊಂದಿಗೆ ದೇಶದ ಅಖಂಡತೆಯನ್ನು ಸಾರುವ ಆಶಯವನ್ನು ಹೊಂದಿದ್ದು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಲ್ಲಿ ಸಂವಿಧಾನದ ಕುರಿತಾಗಿ ಅರಿವು ಮೂಡಿಸುವುದು ಅವಶ್ಯವಿದೆ. ಕಾರಣ, ವಿಶ್ವವಿದ್ಯಾಲಯದಲ್ಲಿ ಜರುಗುವ ಎಲ್ಲ ಕಾರ್ಯಕ್ರಮಗಳನ್ನು ಮೊದಲು ರಾಷ್ಟ್ರಗೀತೆ ಹಾಡುವುದರೊಂದಿಗೆ ಮತ್ತು ಸಂವಿಧಾನ ಪೀಠಿಕೆಯನ್ನು ಓದುವುದರೊಂದಿಗೆ ಪ್ರಾರಂಭಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಸಭೆಗೆ ಪ್ರಸ್ತುತಪಡಿಸಿದ ಪ್ರಾರ್ಥನಾ ಗೀತೆಯು 11 ನಿಮಿಷಗಳದ್ದಾಗಿರುವುದರಿಂದ ಗೀತೆಯನ್ನು ಸಂಕುಚಿತಗೊಳಿಸಿದ (Compress) ನಂತರ ಪ್ರಾರ್ಥನಾ ಗೀತೆಯನ್ನು ಅಳವಡಿಸುವ ಕುರಿತಾಗಿ ನಿರ್ಧರಿಸಲು ತೀರ್ಮಾನಿಸಲಾಯಿತು. |
| 34 | 2025/06/34 | 2024–25ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯ ಅಡಿಯಲ್ಲಿ ಹಮ್ಮಿಕೊಳ್ಳಲು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **2024–25ನೇ** ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯ ಅಡಿಯಲ್ಲಿ ಒಟ್ಟು ರೂ ರೂ. **28.80** ಲಕ್ಷ ಮತ್ತು ಟಿ.ಎಸ್.ಪಿ. ರೂ. **3.60** ಲಕ್ಷ ಒಟ್ಟು **32.40** ಲಕ್ಷ ರೂಪಾಯಿಗಳು ಬಿಡುಗಡೆಯಾಗಿದ್ದು, ಈ ಹಣದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ |

| | | |
|---|---|---|
| | | ಸಹಾಯ ಧನ ರೂ. 10,000/-ಗಳಂತೆ ಪ್ರತಿ ವಿದ್ಯಾರ್ಥಿಗಳಿಗೆ ನೀಡಬೇಕಾಗುತ್ತದೆ. ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಸಾದಿಲ್ವಾರ ವೆಚ್ಚ ಮಹಾಪ್ರಭಂದ ಮಂಡನೆಗೆ ಹಣಕಾಸಿನ ನೆರವು ಮತ್ತು 50% ಶುಲ್ಕ ಮರುಪಾವತಿ ಮಾಡಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಮೀಸಲಿರಿಸಿದ 24.10% ಅನುದಾನದಲ್ಲಿ ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಭೆಯು ಅನುಮೋದನೆ ನೀಡಿತು. |
| 35 | 2025/06/35 | 2025–26ನೇ ಸಾಲಿನ ಮೊದಲನೆ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ದಿನಾಂಕ: 30.05.2025 ರಂದು ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇಲ್ಲಿ ಜರುಗಿದ 2025–26 ನೇ ಸಾಲಿನ ಮೊದಲನೆ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 36 | 2025/06/36 | ವಿಶ್ವವಿದ್ಯಾಲಯದ ಹಣಕಾಸು ವಿಭಾಗದ ಲೆಕ್ಕಪತ್ರಗಳನ್ನು Tally ಯಲ್ಲಿ ನಿರ್ವಹಣೆಯನ್ನು ನಿರ್ವಹಿಸಲು ಕನಿಷ್ಠ 05 ವರ್ಷ ಲೆಕ್ಕಪರಿಶೋಧಕರಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಯನ್ನು ನೇಮಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಲೆಕ್ಕ ಪತ್ರ ನಿರ್ವಹಣೆಯನ್ನು ಸಂಪೂರ್ಣವಾಗಿ ಟ್ಯಾಲಿಯಲ್ಲಿ ನಿರ್ವಹಿಸಿರುವುದರಿಂದ ಸದರಿ ಕಾರ್ಯ ಹಾಗೂ ಮೇಲ್ವಿಚಾರಣೆಯನ್ನು ನಿರ್ವಹಿಸಲು ಕನಿಷ್ಠ 5 ವರ್ಷ ಲೆಕ್ಕ ಪರಿಶೋಧಕರಲ್ಲಿ (ಸಿಎ) ಕಾರ್ಯನಿರ್ವಹಿಸಿರುವ ಸಿಬ್ಬಂದಿಯ ಅವಶ್ಯಕತೆಯಿದ್ದು, ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣೆಯನ್ನು Accepted Accounting Standard ಪ್ರಕಾರ ಪ್ರತಿನಿತ್ಯ ಆದ್ಯತೆ ಮೇರೆಗೆ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾರ್ಯಕ್ಕೆ ನುರಿತ 02 ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| 37 | 2025/06/37 | ಪ್ರೊ. ಗುಂಡಣ್ಣ ಕಲಬುರ್ಗಿ, ಶಾಸ್ತ್ರೀಯ ಕನ್ನಡ ಅಧ್ಯಯನ ವಿಭಾಗ ಇವರು ತಮ್ಮ ವಯೋನಿವೃತ್ತಿಗೆ ಸಂಬಂಧಿಸಿದಂತೆ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ಕುರಿತು. |
| | ತೀರ್ಮಾನ | ಪ್ರೊ. ಗುಂಡಣ್ಣ ಕಲಬುರ್ಗಿ, ಶಾಸ್ತ್ರೀಯ ಕನ್ನಡ ಅಧ್ಯಯನ ವಿಭಾಗ ಇವರು ದಿನಾಂಕ: 31.05.2025 ರಂದು 62 ವರ್ಷ ಪೂರ್ಣಗೊಳಿಸಿರುವುದರಿಂದ ವಯೋನಿವೃತ್ತಿ ನೋಟಿಸ್ ನೀಡಲಾಗಿತ್ತು. ಆದರೆ ಸದರಿಯವರು ತಮ್ಮ ವಯೋನಿವೃತ್ತಿಯನ್ನು 62 ವರ್ಷದ ಬದಲಾಗಿ 65 ವರ್ಷಕ್ಕೆ ನಿಗದಿ ಕೋರಿ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುತ್ತಾರೆ. ಉಚ್ಚ ನ್ಯಾಯಾಲಯವು ಪ್ರೊ. ಗುಂಡಣ್ಣ ಕಲಬುರ್ಗಿ ಇವರ ವಯೋನಿವೃತ್ತಿಗೆ ತಡೆಯಾಜ್ಞೆ(Stay) ನೀಡಿದ್ದು Stay Order Vacate ಮಾಡುವ ಕ್ರಮ ಪ್ರಕ್ರಿಯೆಯಲ್ಲಿದೆ. ಸದರಿ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು. |
| 38 | 2025/06/38 | ಕರ್ನಾಟಕ ರಾಜ್ಯ ಗ್ರಂಥಾಲಯಗಳ ರಾಜ್ಯ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸಲು ಸಿಂಡಿಕೇಟ್ ಪ್ರಾಧಿಕಾರದಿಂದ ಓರ್ವ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು. |
| | ತೀರ್ಮಾನ | ಕರ್ನಾಟಕ ಸರ್ಕಾರದ ಪತ್ರ ದಿನಾಂಕ: 29.04.2025 ರಲ್ಲಿ ರಾಜ್ಯ ಗ್ರಂಥಾಲಯಗಳ ಕಾಯ್ದೆ 1965 ರ ನಿಯಮ 3 ಉಪಬಂಧಗಳ ಅನುಸಾರ ರಾಜ್ಯ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸಲು ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರದಿಂದ ಓರ್ವ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಿ ಸರ್ಕಾರಕ್ಕೆ ಸೂಚಿಸುವಂತೆ ತಿಳಿಸಿರುತ್ತಾರೆ. ಕಾರಣ, ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರದಿಂದ ಡಾ. ಕಾವೇರಿ.ಎಚ್.ಎಂ. ಇವರನ್ನು ನಾಮನಿರ್ದೇಶನ ಮಾಡಲು ಸಭೆಯು ತೀರ್ಮಾನಿಸಿತು. |
| 39 | 2025/06/39 | ಶ್ರೀ ರಫೀ ಭಂಡಾರಿ ಹಾಗೂ ಶ್ರೀ ಮಹಾಂತೇಶ ಕಂಬಾರ ಸಿಂಡಿಕೇಟ್ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳು |

| | | |
|---|---|---|
| | ತೀರ್ಮಾನ | ಶ್ರೀ ರಫೀ ಭಂಡಾರಿ:<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ, ವಿಜಯಪುರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಕಳೆದ 7–8 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿಕೊಂಡು ಬರುತ್ತಿರುವ ತಾತ್ಕಾಲಿಕ ನೌಕರರು ಗಂಭೀರ ಕಾಯಿಲೆಗೆ ತುತ್ತಾದಾಗ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ಹಣಕಾಸಿನ ನೆರವು ನೀಡುವುದಿಲ್ಲ. ಸದರಿ ಸಿಬ್ಬಂದಿಗಳು ಉದ್ಯೋಗದ ಭದ್ರತೆಯಿಲ್ಲದೆ ಇತ್ತ ಸಾಮಾಜಿಕ ಮತ್ತು ಕೌಟುಂಬಿಕ ಭದ್ರತೆಯೂ ಇಲ್ಲದೆ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು ವಿಶ್ವವಿದ್ಯಾಲಯದ ವತಿಯಿಂದ ಸಣ್ಣದೊಂದು ಮೆಡಿಕಲ್ ಕ್ಲೇಮ್ ಪ್ಯಾಕೇಜ್ ನೀಡಲು ಮನವಿ ಮಾಡಿದರು. ಪ್ರಸ್ತುತ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ತಾತ್ಕಾಲಿಕ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಅಶೋಕ ಹಿಪ್ಪರಗಿ ಇವರು ಗಂಭೀರ ಕಾಯಿಲೆ(ಕ್ಯಾನ್ಸರ್) ನಿಂದ ಬಳುತ್ತಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.<br>ಚರ್ಚಿಸಿದ ಸಭೆಯು, ಮಾನವೀಯ ಹಿತದೃಷ್ಠಿಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ, ವಿಜಯಪುರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಗಂಭೀರ ಕಾಯಿಲೆಯಿಂದ ಬಳಲುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳಿಗೆ ರೂ.50,000/- ರಿಂದ ರೂ.1,00,000/- ವರೆಗೆ ಆರ್ಥಿಕ ನೆರವು ನೀಡಲು ಸಭೆಯು ತೀರ್ಮಾನಿಸಿತು. ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳು ವೈದ್ಯಕೀಯ ಬಿಲ್ಲುಗಳನ್ನು ಪರಿಶೀಲಿಸಲು ಸೂಚಿಸಿತು.<br>ಶ್ರೀ ಮಹಾಂತೇಶ ಕಂಬಾರ:<br>ವಿಶ್ವವಿದ್ಯಾಲಯದಲ್ಲಿ ಜಾರಿ ಮಾಡಲಾದ ಇ-ವಿದ್ಯಾ (E-Vidya App) ನಲ್ಲಿ ನೊಂದಣಿ ಮಾಡಿಸಿಕೊಂಡ ವಿದ್ಯಾರ್ಥಿಗಳ ಸಂಖ್ಯೆ, ಶುಲ್ಕ, ವಿಕ್ಷಣೆ ವಿವರಗಳ ಕುರಿತಾಗಿ ಮಾಹಿತಿ ಕೋರಿದರು. ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಅಂಕಿ-ಅಂಶಗಳ ವಿವರವನ್ನು ಸಭೆಗೆ ಮಂಡಿಸಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು. |
| | | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು** |
| | 2025/06/I | ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದ 6ನೇ ಸೆಮಿಸ್ಟರ್‌ನ ಪ್ರಶ್ನೆಪತ್ರಿಕೆಯಲ್ಲಿನ ದೋಷ ಹಾಗೂ ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದ ಪರೀಕ್ಷಕ ಮಂಡಳಿಯು ಪರೀಕ್ಷಾ ಗೌಪ್ಯತೆಯನ್ನು ಕಾಯ್ದುಕೊಳ್ಳದೇ ಇರುವ ಕುರಿತು. |
| | ತೀರ್ಮಾನ | ದಿನಾಂಕ: 20.05.2025 ರಂದು ಜರುಗಿದ ಬಿ.ಕಾಂ. 6ನೇ ಸೆಮಿಸ್ಟರ್‌ನ QP Code: 48142, INCOME TAX LAW AND PRACTICE-II ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ 10 ಅಂಕದ ಪ್ರಶ್ನೆ ಸಂಖ್ಯೆ : 09 ಅಪೂರ್ಣವಾಗಿರುವ ಬಗ್ಗೆ ತಿಳಿದುಬಂದಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಮರು ಪರೀಕ್ಷೆ ನಡೆಸಲಾಗಿರುವ ಮಾಹಿತಿಯನ್ನು ಸಭೆಗೆ ನೀಡಲಾಯಿತು. ಪರಿಶೀಲಿಸಿದ ಸಭೆಯು ತಪ್ಪಿತಸ್ಥರಿಗೆ ಕಪ್ಪು ಪಟ್ಟಿಗೆ (Black List) ಸೇರಿಸಲು ಸೂಚಿಸಿತು. ಮರುಪರೀಕ್ಷೆಯಿಂದಾಗಿ ತಗುಲಿದ ವೆಚ್ಚದ ವಿವರವನ್ನು ಮುಂದಿನ ಸಭೆಗೆ ಮಂಡಿಸಲು ಕುಲಸಚಿವರು(ಮೌ) ಇವರಿಗೆ ಸೂಚಿಸಿ, ಅದನ್ನಾಧರಿಸಿ ದಂಡವನ್ನು ನಿಗದಿಪಡಿಸಲು ತೀರ್ಮಾನಿಸಲಾಯಿತು.<br>ಪ್ರಕರಣ2:<br>ಸ್ನಾತಕ ವಾಣಿಜ್ಯಶಾಸ್ತ್ರ ವಿಭಾಗದ ಪರೀಕ್ಷರ ಮಂಡಳಿಯು ಅಂತಿಮಗೊಳಿಸಿದ ಬಿ.ಕಾಂ 6ನೇ ಸೆಮಿಸ್ಟರ್‌ಗೆ ಸೇರಿದ ಪ್ರಶ್ನೆ ಪತ್ರಿಕೆ ಲೋಪಗಳನ್ನು ಪರಿಶೀಲಿಸಿ ವರದಿಯನ್ನು ನೀಡಲು ಪರೀಕ್ಷಾ "ಸುಧಾರಣಾ ಸಮಿತಿ" ಇವರಿಗೆ ಸಭೆಯು ಸೂಚಿಸಿತು. |
| | 2025/06/II | ಸ್ನಾತಕ ವಿಭಾಗಗಳ ರಾಷ್ಟ್ರೀಯ ಶಿಕ್ಷಣ ನೀತಿ-2020 (NEP) B.Ed. & B.P.Ed ಪಠ್ಯಕ್ರಮಗಳ ಪರಿಷ್ಕೃತ ನಿಯಮಾವಳಿಗಳನ್ನು ಅನುಮೋದಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ವಿಭಾಗಗಳ ರಾಷ್ಟ್ರೀಯ ಶಿಕ್ಷಣ ನೀತಿ-2020(NEP) B.Ed. & B.P.Ed ಪಠ್ಯಕ್ರಮಗಳ ಪರಿಷ್ಕೃತ ನಿಯಮಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| | 2025/06/III | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ Intellectual Property Rights" (IPR) Policy ಕುರಿತು ನಿಯಮಾವಳಿಗಳನ್ನು ರಚಿಸುವ ಕುರಿತು. |

<table>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Intellectual Property Rights" (IPR) Policy ಯ ನಿಯಮಾವಳಿಗಳನ್ನು ರಚಿಸಲು ಸಭೆಯು ಅನುಮೋದನೆ ನೀಡಿತು.</td></tr>
<tr><td></td><td>2025/06/IV</td><td>Khelo India ಯೋಜನೆಯಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ Indoor ಮತ್ತು Outdoor Stadium ಕಟ್ಟಡಕ್ಕಾಗಿ ಪ್ರಸ್ತಾವನೆ ಕುರಿತು</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ Khelo India ಯೋಜನೆಯಡಿಯಲ್ಲಿ Indoor ಮತ್ತು Outdoor Stadium ಕಟ್ಟಡಕ್ಕಾಗಿ ಈಗಾಗಲೇ DPAR ಸಿದ್ಧಪಡಿಸಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು. Online Portal ನಲ್ಲಿ ಅಳವಡಿಸಲು ಮತ್ತು ಹಿಂಬಾಲಿಸಲು(Follow-up) ತೀರ್ಮಾನಿಸಲಾಯಿತು.</td></tr>
<tr><td></td><td>2025/06/V</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜ್ಯುಕೇಶನ ಅಡಿಯಲ್ಲಿ ಬರುವ ಎಮ್.ಪಿ.ಎಡ್ ಕೋರ್ಸನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ನೂತನ ಕ್ಯಾಂಪಸ್‌ನಲ್ಲಿ ಪ್ರಾರಂಭಿಸಲು ಎನ್.ಸಿ.ಟಿ.ಇ.(NCTE), ನವದೆಹಲಿ ಇವರಿಂದ ಮಾನ್ಯತೆ ಪಡೆಯಲು ಸಭೆಯು ಅನುಮೋದನೆ ನೀಡಿತು.</td></tr>
<tr><td></td><td>2025/06/VI</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವೀರರಾಣಿ ಬೆಳವಡಿ ಮಲ್ಲಮ್ಮ ಅಧ್ಯಯನ ಪೀಠವನ್ನು ಪ್ರಾರಂಭಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವೀರರಾಣಿ ಬೆಳವಡಿ ಮಲ್ಲಮ್ಮ ಅಧ್ಯಯನ ಪೀಠವನ್ನು ಪ್ರಾರಂಭಿಸಲು ಹಾಗೂ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದನೆ ನೀಡಿತು.</td></tr>
<tr><td></td><td>2025/06/VIII</td><td>Sports Policy ಗೆ ಅನುಮೋದನೆ ನೀಡುವ ಕುರಿತು</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ Sports Policy ಅನುಷ್ಠಾನಗೊಳಿಸುವ ವಿಷಯವನ್ನು Policy ಗಳನ್ನು ಅಧ್ಯಯನ ನಡೆಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲು ನಿರ್ಧರಿಸಲಾಯಿತು.</td></tr>
<tr><td></td><td>2025/06/VIII</td><td>2025-26ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಕೋರ್ಸ‌ಗಳ ಆರಂಭಕ್ಕೆ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಲಾ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ಕುರಿತು</td></tr>
<tr><td></td><td>ತೀರ್ಮಾನ</td><td>2025-26 ನೇ ಶೈಕ್ಷಣಿಕ ಸಾಲಿನಿಂದ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಕಲಾ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಹೊಸ ಕೋರ್ಸ‌ಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುವರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 59 ರ ಉಪಪ್ರಕರಣ 6(2) ರನ್ವಯ, ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು. ವರದಿಯನ್ನು ಪರಿಶೀಲಿಸಿದ ಸಮಿತಿಯು ಈ ಕೆಳಕಾಣಿಸಿದಂತೆ ತೀರ್ಮಾನಿಸಲಾಯಿತು.
<table>
<tr><th>ಸಂ</th><th>ಕೋರ್ಸ</th><th>ಪ್ರವೇಶ ಮಿತಿ</th></tr>
<tr><td>1</td><td>Bachelor of Computer Application</td><td>60</td></tr>
<tr><td>2</td><td>Master of Business Admission</td><td>60</td></tr>
</table></td></tr>
<tr><td></td><td>2025/06/IX</td><td>2025-26 ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಹೊಸ ಕೋರ್ಸನ ಆರಂಭದ ಅನುಮೋದನೆಗೆ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ಕುರಿತು</td></tr>
<tr><td></td><td>ತೀರ್ಮಾನ</td><td>2025-26 ನೇ ಶೈಕ್ಷಣಿಕ ಸಾಲಿನಿಂದ ಕೆ.ಎಲ್.ಇ. ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ(ಸ್ವಾಯತ್ತ)ದಿಂದ ಹೊಸ ಕೋರ್ಸನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುವರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 59 ರ ಉಪಪ್ರಕರಣ 6(2) ರನ್ವಯ, ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಸಲ್ಲಿಸಿದ ವರದಿಯನ್ನು ಸಭೆಗೆ</td></tr>
</table>

ಪ್ರಸ್ತುತಪಡಿಸಲಾಯಿತು. ವರದಿಯನ್ನು ಪರಿಶೀಲಿಸಿದ ಸಮಿತಿಯು ಈ ಕೆಳಕಾಣಿಸಿದಂತೆ ಪ್ರವೇಶಾತಿ ಮಿತಿಯನ್ನು ಮಂಜೂರು ಮಾಡಲು ಸಭೆಯು ತೀರ್ಮಾನಿಸಲಾಯಿತು.

| ಸಂ | ಕೋರ್ಸ | ಪ್ರವೇಶ ಮಿತಿ |
|---|---|---|
| 1 | Master of Computer Application | 40 |

**2025/06/X**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಶಿಲ್ಪಾ ದಾನಪ್ಪನವರ ಹಾಗೂ ರಾಜಶೇಖರ ತೋರವಿ ಇವರುಗಳು ಕಛೇರಿ ಕಾರ್ಯದಲ್ಲಿ ಪದೇ ಪದೇ ನಿರ್ಲಕ್ಷ್ಯವಹಿಸುತ್ತಿರುವುದಿಂದ ಪರಿಶೀಲಿಸಿ ವರದಿ ಸಲ್ಲಿಸಲು "ವಿಚಾರಣಾ ಸಮಿತಿ" ಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಹಲವಾರು ಬಾರಿ ವಿಚಾರಣೆ ನಡೆಸಿ ಸಲ್ಲಿಸಿದ ವರದಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ವರದಿಯನ್ನು ಪರಿಶೀಲಿಸಿದ ಸಭೆಯು ಶ್ರೀಮತಿ ಶಿಲ್ಪಾ ದಾನಪ್ಪನವರ ಹಾಗೂ ರಾಜಶೇಖರ ತೊರವಿ ಇಬ್ಬರು ಸಿಬ್ಬಂದಿಗಳಿಗೆ ನಿಯಮಾನುಸಾರ ಶಿಸ್ತು ಕ್ರಮದ ಆದೇಶ ಹೊರಡಿಸಲು ಸಭೆಯು ತೀರ್ಮಾನಿಸಿತು.

**2025/06/XI**

**2025–26 ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸಗಳ ಪ್ರವೇಶಾತಿ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.**

ತೀರ್ಮಾನ

2025–26 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್‌ನ ಸ್ನಾತಕ ಕೋರ್ಸಗಳಿಗೆ ನಿಗದಿಪಡಿಸಿದ ಪ್ರವೇಶಾತಿ ಶುಲ್ಕಗಳು ಹೆಚ್ಚಾಗಿರುವ ಕುರಿತು ಸದಸ್ಯರುಗಳು ಈ ಕೆಳಕಾಣಿಸಿದಂತೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದರು.

**ಶ್ರೀ ಮಹಾಂತೇಶ ಕಂಬಾರ:**

ಸರ್ಕಾರದ ಆದೇಶದ ಅನುಸಾರ ಏಕರೂಪ ಶುಲ್ಕವನ್ನು ವಿಶ್ವವಿದ್ಯಾಲಯದ ಸಂಯೋಜಿತ ಪದವಿ ಮಹಾವಿದ್ಯಾಲಯ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಅಳವಡಿಸಲಾಗಿದ್ದು ಇದು ದುಪ್ಪಟ್ಟಾಗಿದೆ. ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದು ಪ್ರವೇಶಾತಿ ಶುಲ್ಕದಿಂದಾಗಿ ಪ್ರವೇಶಾತಿ ಕಡಿಮೆಯಾಗುವ ಸಂಭವವಿರುತ್ತದೆ. ರಾಜ್ಯದ ಬೇರೆ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ಶುಲ್ಕವನ್ನು ಅಳವಡಿಸಿಕೊಂಡಿರುವುದಿಲ್ಲ. ಕಾರಣ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಕೂಡ ಏಕರೂಪ ಶುಲ್ಕವನ್ನು ರದ್ದುಪಡಿಸಿ ಹಿಂದಿನಂತೆ ಶುಲ್ಕಗಳನ್ನು ನಿಗದಿಪಡಿಸಲು ಸಲಹೆ ನೀಡಿದರು. ವಿದ್ಯಾರ್ಥಿಗಳಿಗೆ ಹಣವನ್ನು ಮರು ಸಂದಾಯ ಮಾಡಲು ಕೋರಿದರು.

**ಶ್ರೀ ರವೀಂದ್ರ ಎಂ. ನಾಯ್ಕರ್:**

ಹೆಚ್ಚುವರಿ ಶುಲ್ಕದಿಂದಾಗಿ ವಿದ್ಯಾರ್ಥಿಗಳ ಪ್ರವೇಶಾತಿಯು ಕುಂಠಿತವಾಗುತ್ತದೆ. ಕಾರಣ, ಪ್ರವೇಶಾತಿ ಶುಲ್ಕವನ್ನು 10 ರಿಂದ 20% ಮಾತ್ರ ಹೆಚ್ಚಿಸಲು ಸಲಹೆ ನೀಡಿದರು.

**ಕುಲಸಚಿವರು:**

ಸರ್ಕಾರದ ಏಕರೂಪ ಶುಲ್ಕದ ಆದೇಶದಂತೆ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕ ನಿಗದಿಪಡಿಸಲಾಗಿದೆ. ಜೊತೆಗೆ, ಉತ್ತರ ಪತ್ರಿಕೆ ಮೌಲ್ಯಮಾಪಕರಿಗೂ ಕೂಡ ಸಂಭಾವನೆಯನ್ನು ನಿಗದಿಪಡಿಸಲಾಗಿದೆ. ಮುಂದುವರೆದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಂತೆ ಶಿಷ್ಯವೇತನ ಸೌಲಭ್ಯ ಮಂಜೂರಾಗುತ್ತದೆ ಎಂದರು.

**ಕುಲಪತಿಗಳು:**

ವಿಶ್ವವಿದ್ಯಾಲಯವು ಪಡೆಯುತ್ತಿರುವ ಶುಲ್ಕದಲ್ಲಿ ಮಹಾವಿದ್ಯಾಲಯದವರ ಪಾಲು ಕೂಡ ಇರುತ್ತದೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವುದರಿಂದ ರಸ್ತೆ, ನೀರು ಹಾಗೂ ಇನ್ನಿತರ ಮೂಲಸೌಕರ್ಯಗಳ ಅಭಿವೃದ್ಧಿಗೆ ಆರ್ಥಿಕ ಸಹಾಯವಾಗುವುದು.

ಚರ್ಚಿಸಿದ ಸಭೆಯು, ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕಗಳನ್ನು ಪರಿಶೀಲಿಸಿ ಪ್ರಸ್ತುತ ಏಕರೂಪ ಶುಲ್ಕದಲ್ಲಿ ಕೇವಲ Non-

Professional Courses ಗಳಿಗೆ ಶೇ.30 ರಷ್ಟು ಶುಲ್ಕವನ್ನು ಕಡಿತಗೊಳಿಸಿ ಈ ಕೆಳಕಾಣಿಸಿದಂತೆ 2025–26 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಕೋರ್ಸಗಳ ಪರಿಷ್ಕೃತ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.

**REGISTRATION & OTHER FEES FOR UG FOR THE ACADEMIC YEAR 2025-26**

| UG COURSES | REG FEES | OTHER FEES | TOTAL | REG FEES | OTHER FEES | TOTAL |
|---|---|---|---|---|---|---|
| A) Under Granduate Professional Courses: BBA/BCA/B.Sc(CS)/other Professional Courses) | 1500 | 3300 | 4800 | 0 | 2200 | 2200 |
| B) Under Granduate Non-Professional Courses: C) BA/B.Sc/B.Sc(Sugar Technology)/)/B.Com/BSW/other Non-Professional Courses) | 700 | 2400 | 3100 | 0 | 1630 | 1630 |

ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಪ್ರವೇಶಾತಿ ಶುಲ್ಕವನ್ನು Non-Professional Courses ಗೆ ಶೇ. 30 ರಷ್ಟು ಕಡಿತಗೊಳಿಸಿ ಹಾಗೂ Professional Courses ಯನ್ನು ಯಥಾವತ್ತಾಗಿ ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.

| | |
|---|---|
| 2025/06/XII | ಸಿಂಡಿಕೇಟ್ ಸಭೆಯಲ್ಲಿ ರಚಿಸಲಾಗುವ ಉಪಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನು ಅಧ್ಯಕ್ಷರು ಹಾಗೂ ಸದಸ್ಯರುಗಳನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ. ಆದರೆ, ಸಿಂಡಿಕೇಟ್ ಸದಸ್ಯರ ಅವಧಿ ಪೂರ್ಣಗೊಂಡಲ್ಲಿ ಬೇರೆ ಸಿಂಡಿಕೇಟ್ ಸದಸ್ಯರನ್ನು ಉಪಸಮಿತಿಗೆ ನೇಮಕ ಮಾಡಲು ಸಭೆಯು ಅನುಮೋದನೆ ನೀಡಿತು. |
| 2025/06/XIII | ಸಂಯೋಜಿತ ಎಲ್ಲಾ ಮಹಾವಿದ್ಯಾಲಯ, ಸ್ವಾಯತ್ತ ಸಂಸ್ಥೆಗಳು ಕಡ್ಡಾಯವಾಗಿ ಪತ್ರ ವ್ಯವಹಾರ, ನಾಮಫಲಕಗಳಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರು, ಲಾಂಛನ ಕಡ್ಡಾಯವಾಗಿ ಬಳಸಲು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು. |
| 2025/06/XIV | ವಿಶ್ವವಿದ್ಯಾಲಯದಲ್ಲಿ ಆಹ್ವಾನಿಸುವ ಎಲ್ಲ ಕೋಟೇಶನ, ಟೆಂಡರ್‌ಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಸಲಹೆ ನೀಡಿದರು. |
| 2025/03/XV | ವಿಶ್ವವಿದ್ಯಾಲಯದಲ್ಲಿ ಆಯೋಜಿಸುವ ಕಾರ್ಯಕ್ರಮಗಳು, ಉದ್ಯೋಗಮೇಳ ಸೆಮಿನಾರ್, ಕಾರ್ಯಾಗಾರಗಳನ್ನು ಸಾಮಾಜಿಕ ಮಾಧ್ಯಮ(Social Media) ದಲ್ಲಿ ಪ್ರಚಾರ ಮಾಡಲು ಇದರಿಂದ ಪ್ರವೇಶಾತಿ ಹೆಚ್ಚಿಸಲು ಅನುಕೂಲವಾಗುವುದು ಎಂದು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಸಲಹೆ ನೀಡಿದರು. |

| | | |
|---|---|---|
| | 2025/03/XVI | ಕೆನರಾ ಬ್ಯಾಂಕ್‌ನಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುವ ಮಹಿಳೆಯರಿಗಾಗಿ Angel Scheme ಯೋಜನೆ ಇದ್ದು ವಿಶ್ವವಿದ್ಯಾಲಯದ ಮಹಿಳಾ ಸಿಬ್ಬಂದಿಗಳು ಬ್ಯಾಂಕ್‌ನಿಂದ ಅದರ ಮಾಹಿತಿಯನ್ನು ಪಡೆದುಕೊಳ್ಳಲು ಸದಸ್ಯರಾದ ಡಾ. ಕಾವೇರಿ. ಎಚ್.ಎಂ. ಇವರು ಸಭೆಗೆ ತಿಳಿಸಿದರು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.